# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

Nesaru **Tingalole** Vol XXIV - 4 ಏಪ್ರಿಲ್ 2006



ಮೈಸೂರು ಅಸೋಸಿಯೇಷನ್‌ನಲ್ಲಿ ಡಾ. ಚಂದ್ರಶೇಖರ ಕಂಬಾರರಿಗೆ ಸನ್ಮಾನ

**Rs. 5/-**

**The Mysore Association, Bombay**
393, Bhaudaji Road, Matunga, Mumbai - 400 019.
Phone : 2402 4647, 2403 7065 • Fax : 2401 0574
E-mail : karunadu@bom5.vsnl.net.in

ಅಸೋಸಿಯೇಷನ್‌ನಲ್ಲಿ

# ಡಾ. ಚಂದ್ರಶೇಖರ ಕಂಬಾರರ ನಾಟಕೋತ್ಸವ



ಉದ್ಘಾಟನಾ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿದ್ದ ಶ್ರೀ ನರಸಿಂಹ ಪಾಲ್ ಅವರನ್ನು ಅಸೋಸಿಯೇಷನ್‌ನ ಉಪಾಧ್ಯಕ್ಷರಾದ ಡಾ. ಎಚ್. ಎಸ್. ಶ್ರೀನಿವಾಸ ಪುಷ್ಪಗುಚ್ಛ ನೀಡಿ ಸ್ವಾಗತಿಸುತ್ತಿದ್ದಾರೆ.

ಫೆಬ್ರವರಿ ೨೬, ೨೦೦೬ರಂದು ಅಸೋಸಿಯೇಶನ್ ಆರಂಭವಾಗಿ ೮೦ ವರ್ಷ ತುಂಬಿತು. ನವೆಂಬರ್ ೨೦೦೫ ಹಾಯಿನಾಡಾದ ಕರ್ನಾಟಕ ರಾಜ್ಯವು ಸುವರ್ಣ ವರ್ಷವನ್ನು ಆಚರಿಸಿತು. ಇದೇ ನಿಮಿತ್ತವಾಗಿ ೨೦೦೬ರಲ್ಲಿ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಂಚಿಕೊಂಡು ಒಂದು ಉತ್ಸವದ ರೂಪದಲ್ಲಿ ಅದನ್ನು ನಡೆಸಿಕೊಂಡು ಬರಬೇಕೆಂಬುದು ಅಸೋಸಿಯೇಶನ್‌ನ ಇಚ್ಛೆ. ಅದೇ ರೀತಿ ಜನವರಿ ೨೦೦೬ರಲ್ಲಿ ಕನ್ನಡದ ಒಬ್ಬ ಮಹಾನ್ ಸಾಹಿತಿ, ದಾರ್ಶನಿಕ ಡಿವಿಜಿಯಯವರ ಸಂಸ್ಮರಣೆಯನ್ನು ಆಚರಿಸಲಾಯಿತು. ಫೆಬ್ರವರಿಯಲ್ಲಿ ಎಲ್ಲ ಕನ್ನಡಿಗರ ಮನದಲ್ಲಿ ಮನೆ ಮಾಡಿರುವ ಕಿರುತೆರೆಯ ಧಾರಾವಾಹಿ 'ಮುಕ್ತಾ'ದ ನಿರ್ಮಾಪಕಿ, ನಿರ್ದೇಶಕ ಹಾಗೂ ನಟನಟಿಯರ ಕೂಡ ಒಂದು ಸಂವಾದ ಕಾರ್ಯಕ್ರಮ ನಡೆಸಲಾಯಿತು. ಇದೀಗ ಮಾರ್ಚ್ ತಿಂಗಳಿನಲ್ಲಿ ಕನ್ನಡ ಇನ್ನೊಬ್ಬ ಹೆಸರಾಂತ ಸಾಹಿತಿ, ನಾಟಕಕಾರ ಡಾ. ಚಂದ್ರಶೇಖರ ಕಂಬಾರರ ನಾಟಕೋತ್ಸವವನ್ನು ದಿನಾಂಕ ೨೩ರಿಂದ ೨೬ರ ವರೆಗೆ ಅಸೋಸಿಯೇಷನ್ ಸಭಾಂಗಣದಲ್ಲಿ ನಡೆಸಲಾಯಿತು.

ದಿನಾಂಕ ೨೩, ಗುರುವಾರ ಸಂಜೆ ಏಕೆ ಉತ್ಸವದ ಉದ್ಘಾಟನೆ ಮಾಡಿದವರು ಕರ್ನಾಟಕದ ಹೆಮ್ಮೆಯ ಹಣಕಾಸು ಸಂಸ್ಥೆಯಾದ ಕಾರ್ಪೋರೇಷನ್ ಬ್ಯಾಂಕ್ ಮುಂಬಯಿ ವಿಭಾಗದ ಮುಖ್ಯ ವ್ಯವಸ್ಥಾಪಕರಾದ ಶ್ರೀ ನರಸಿಂಹ ಪಾಲ್‌ರವರು. ದೀಪ ಬೆಳಗಿಸಿ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದ ಪಾಲ್ ಅವರು "ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ಇನ್ನಷ್ಟು ಮತ್ತಷ್ಟು ಜರುಗಬೇಕು. ಡಾ. ಕಂಬಾರರಂತ ಹಿರಿಯ, ಉದ್ದಾಮ ಸಾಹಿತಿಗಳನ್ನು ಆದರಿಸಬೇಕಾದುದು ಕನ್ನಡಿಗರೆಲ್ಲರ ಕರ್ತವ್ಯ. ಈ ಸಂದರ್ಭದಲ್ಲಿ



ಡಾ. ಕಂಬಾರರನ್ನು ಅಸೋಸಿಯೇಷನ್‌ನ ಅಧ್ಯಕ್ಷರಾದ ಶ್ರೀ ದೊರೆಸ್ವಾಮಿಯವರು ಪುಷ್ಪಗುಚ್ಛ ನೀಡಿ ಸ್ವಾಗತಿಸುತ್ತಿದ್ದಾರೆ.

ಕಾರ್ಪೋರೇಷನ್ ಬ್ಯಾಂಕ್ ಮೈಸೂರು ಅಸೋಸಿಯೇಷನ್‌ಗೆ ಸಹಾಯ ಹಸ್ತ ನೀಡಲು ಬಹಳ ಸಂತೋಷ ಪಡುತ್ತದೆ" ಎಂದರು.

ಅಂದು ಮೈಸೂರಿನಿಂದ ಬಂದಿದ್ದ ನಟನ ತಂಡದವರಿಂದ ಡಾ. ಚಂದ್ರಶೇಖರ ಕಂಬಾರರ ನಾಟಕಗಳಲ್ಲಿ ಒಂದು ವಿಶಿಷ್ಟ ಬಗೆಯ ವರ್ಚಸನ್ನು ಹೊಂದಿರುವ ವಿಡಂಬನಾ ನಾಟಕ 'ಸಾಂಬಶಿವ ಪ್ರಹಸನ'ದ ಪ್ರಯೋಗವಿತ್ತು. ನಾಟಕದ ನಿರ್ದೇಶನ ಮಾಡಿದವರು ಶ್ರೀ ನಟರಾಜ ಹೊನ್ನವಳ್ಳಿಯವರು ಅವರು ಕೆ.ವಿ. ಸುಬ್ಬಣ್ಣನವರ 'ನೀನಾಸಂ'ನಲ್ಲಿ ತರಬೇತಿ ಪಡೆದವರು. ನಾಟಕ ವಿಕೃತವಾಗಿದ್ದರೂ ಒಳ್ಳೆಯ ಹುರುಪಿನ ನಟನೆಯಿಂದ ಪ್ರೇಕ್ಷಕರ ಗಮನ ಸೆಳೆಯುವುದರಲ್ಲಿ ಯಶಸ್ವಿಯಾಯ್ತು.

ಎರಡನೆಯ ದಿನದ ಕಾರ್ಯಕ್ರಮ ನಾಟಕಕಾರರಾದ



ಸನ್ಮಾನ ಸಮಾರಂಭದ ಮುಖ್ಯ ಅತಿಥಿಗಳಾಗಿದ್ದ ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಗಳಾದ ಶ್ರೀ ವಿ. ಆರ್. ಸುದರ್ಶನ್ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿರುವುದು.



ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಶ್ರೀನಿವಾಸ ಕಪ್ಪಣ್ಣನವರನ್ನು ಅಸೋಸಿಯೇಷನ್‌ನ ಅಧ್ಯಕ್ಷರಾದ ಶ್ರೀ ದೊರೆಸ್ವಾಮಿಯವರುಪುಷ್ಪಗುಚ್ಛ ನೀಡಿ ಸ್ವಾಗತಿಸುತ್ತಿದ್ದಾರೆ.

ಡಾ. ಕಂಬಾರರೊಡನೆ ನೇರ ಸಂವಾದದಿಂದ ಆರಂಭವಾಯ್ತು. ಕಾರ್ಯಕ್ರಮದ ಸಂಚಾಲನೆ ಮಾಡಿದವರು ಸೋಂದೂರಿನ ಸ್ನಾತಕೋತ್ತರ ಸಂಸ್ಥೆಯ ಪ್ರಾಧ್ಯಾಪಕರಾದ ಡಾ. ವಿಕ್ರಂ ವಿಸಾಜಿಯವರು ಸಂವಾದಕ್ಕೆ ಚಾಲನೆಕೊಡುತ್ತ ಡಾ. ವಿಸಾಜಿಯವರು ಕಂಬಾರರ ಸಾಹಿತ್ಯದ ವಿವಿಧ ಮಗ್ಗುಲುಗಳನ್ನೂ ವೈಶಾಲ್ಯತೆಯನ್ನೂ ಸಭಿಕರ ಮುಂದೆ ತೆರೆದಿಟ್ಟರು. ಈ ಸಂವಾದದಲ್ಲಿ ಪಾಲ್ಗೊಳ್ಳಲು ಮುಂಬಯಿಯ ಎಲ್ಲ ಹೆಸರಾಂತ ಸಾಹಿತಿಗಳೂ ರಂಗಕರ್ಮಿಗಳೂ ಸಹಭಾಗಿಗಳಾಗಿದ್ದು ಕಂಬಾರ ಮೇಲಿನ ಅಭಿಮಾನದಿಂದ ಎಂದು ಬೇರೆ ಹೇಳಬೇಕಾಗಿಲ್ಲ. ಸಂವಾದದಲ್ಲಿ ಅವರ ಪ್ರಶ್ನೆಗಳಿಗೆ ಸ್ಪಂದಿಸುತ್ತಾ, ಡಾ. ಕಂಬಾರರು ತಮ್ಮ ಸಾಹಿತ್ಯ ನೇರ ಸಹೃದಯರ ಮನವನ್ನು ತಟ್ಟಿ "ಇದು ನೈಜ ಘಟನೆಯೋ" ಎಂಬ ಭಾವವನ್ನು ಹುಟ್ಟಿಸಿದುದೇ ಆಗಿದ್ದರೆ ಅಷ್ಟರ ಮಟ್ಟಿಗೆ ತಾವು ಯಶಸ್ವಿಯಾಗಿರುವುದಾಗಿ ಭಾವಿಸುವುದಾಗಿ ತಿಳಿಸಿ ತಮ್ಮ ಸಜ್ಜನಿಕೆಯನ್ನು ತೆರೆದಿಟ್ಟರು. ನಂತರ ಡಾ. ಕಂಬಾರರನ್ನು ಶಾಲು ಹೊದಿಸಿ ಸನ್ಮಾನಿಸಲಾಯ್ತು.



ಕನ್ನಡ ಖ್ಯಾತ ನಟಿ ಉಮಾಶ್ರೀಯವರನ್ನು ಅಸೋಸಿಯೇಷನ್‌ನ ಅಧ್ಯಕ್ಷರಾದ ಶ್ರೀ ದೊರೆಸ್ವಾಮಿಯವರು ಪುಷ್ಪಗುಚ್ಛ ನೀಡಿ ಸ್ವಾಗತಿಸುತ್ತಿದ್ದಾರೆ.

ಸನ್ಮಾನ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದವರು ಕರ್ನಾಟಕ ರಾಜ್ಯದ ವಿಧಾನ ಪರಿಷತ್ತಿನ ಸಭಾಪತಿಗಳಾದ ಶ್ರೀ ವಿ. ಆರ್. ಸುದರ್ಶನ. ಅವರು ಪರಿಷತ್ತು ಅಧಿವೇಶನದಲ್ಲಿರುವಾಗಲೂ ಸ್ವಲ್ಪ ಬಿಡುವು ಮಾಡಿಕೊಂಡು ಬಂದುದು ಡಾ. ಕಂಬಾರರ ಮೇಲಿನ ಗೌರವದಿಂದ. ಡಾ. ಕಂಬಾರ ಗೌರವ ಸಮಾರಂಭದಲ್ಲಿ ಉಪಸ್ಥಿತರಿದ್ದ ಇನ್ನೊಬ್ಬ ಹೆಸರಾಂತ ಕನ್ನಡತಿ ಶ್ರೀಮತಿ ಉಮಾಶ್ರೀ ಕನ್ನಡದ ಹಿರಿಕಿರಿ ತೆರೆಯ ಜನಪ್ರಿಯ ನಟಿ, ರಂಗಭೂಮಿಯ ಬಗ್ಗೆ ವಿಶೇಷ ಆಸಕ್ತಿ ತಳೆದವರು. ಇವರಲ್ಲದೆ ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಶ್ರೀನಿವಾಸ್ ಮತ್ತು ಸದಸ್ಯರಾದ ಶ್ರೀ ಡಿ. ಎನ್. ಚೌಗುಲೆ ಉಪಸ್ಥಿತರಿದ್ದುದು ಸಮಾರಂಭಕ್ಕೆ ಒಂದು ಶಕ್ತಿಯಾಗಿತ್ತು. ಶ್ರೀ ಕಪ್ಪಣ್ಣ ನವರು ಮುಂಬಯಿಯಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಂಡ ಹಿನ್ನಲೆಯನ್ನು ವಿವರಿಸಿ ಮೈಸೂರು ಅಸೋಸಿಯೇಶನ್‌ನ ಈ ಉತ್ಸವದಲ್ಲಿ ತಾವು ಸಹಭಾಗಿಗಳಾಗಿರುವುದು ಸಂತಸವಾಗಿದೆ ಎಂದರು. ಶ್ರೀಮತಿ ಉಮಾಶ್ರೀ ಮತ್ತು ಶ್ರೀ ಚೌಗುಲೆಯವರು ತಮ್ಮ ಅಭಿಮಾನ ಪೂರ್ವಕ ಆದರಾಂಜಲಿಗಳನ್ನು ಅರ್ಪಿಸಿದ ನಂತರ ಮಾತನಾಡಿದ ಶ್ರೀ ಸುದರ್ಶನ್ ಅವರು "ಡಾ. ಕಂಬಾರರಂಥ ಗಣ್ಯ ವ್ಯಕ್ತಿ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾಗಿರುವುದು ಪರಿಷತ್ತಿಗೇ ಒಂದು ಗೌರವ ಬಂದಂತೆ. ಅವರು ಜನಮಾನಸದಲ್ಲಿ ಸದಾ ನೆಲೆಯಾಗಿರುತ್ತಾರೆ" ಎಂದರು.

ಡಾ. ಕಂಬಾರರು ಮಾತನಾಡುತ್ತ "ತಮ್ಮೆಲ್ಲರ ಅಭಿಮಾನದಿಂದ ನನ್ನ ಬಾಯಿ ಕಟ್ಟಿದೆ. ಏನು ಹೇಳುವುದೆಂದೇ ತಿಳಿಯುತ್ತಿಲ್ಲ. ನಾನು ಇಲ್ಲಿ ಉಪಸ್ಥಿತರಿರುವ ಎಲ್ಲ ಗಣ್ಯ ಹಾಗೂ ರಸಿಕರಿಗೆ ಆಭಾರಿಯಾಗಿದ್ದೇನೆ" ಎಂದರು.



ಡಾ. ಚಂದ್ರಶೇಖರ ಕಂಬಾರರ 'ಬದುಕು ಬರಹ' ವಿಚಾರ ಸಂಕಿರಣದ ಸಂಚಾಲನೆ ಮಾಡಿದ ಶ್ರೀ ಡಿ. ಎನ್. ಚೌಗುಲೆಯವರನ್ನು ಅಸೋಸಿಯೇಶನ್‌ನ ಉಪಾಧ್ಯಕ್ಷ ಡಾ. ಶ್ರೀನಿವಾಸ ಪುಷ್ಪಗುಚ್ಛ ನೀಡಿ ಗೌರವಿಸುತ್ತಿದ್ದಾರೆ



ಡಾ. ಚಂದ್ರಶೇಖರ ಕಂಬಾರರ 'ಬದುಕು ಬರಹ' ವಿಚಾರ ಸಂಕಿರಣದಲ್ಲಿ ಡಾ. ವಿಕ್ರಮ್ ವಿಸಾಜಿಯವರು 'ಚಕೋರಿ' ಮಹಾಕಾವ್ಯದ ಕುರಿತು ತಮ್ಮ ವಿಚಾರವನ್ನು ಮಂಡಿಸುತ್ತಿದ್ದಾರೆ.

ಎರಡನೆಯ ದಿನದ ನಾಟಕ 'ಸಿರಿಸಂಪಿಗೆ' ಆಡಿದವರು ಬೆಂಗಳೂರಿನ ನಟರಂಗ ತಂಡದವರು, ಇದರ ನಿರ್ದೇಶಕರು ಪ್ರಮೋದ್ ಶಿಗ್ಗಾವಿಯವರು. ಅವರ ರಂಗವ್ಯವಸ್ಥೆ ವಿಶಿಷ್ಟವಾಗಿದ್ದು ಈ ಕ್ಲಿಷ್ಟನಾಟಕವನ್ನು ಲೀಲಾಜಾಲವಾಗಿ ಆಡಿಸಿಕೊಂಡು ಹೋಯ್ತು. 'ಸಿರಿಸಂಪಿಗೆ'ಯ ಕೇಂದ್ರ ವ್ಯಕ್ತಿಯಾಗಿ ಅವರು ಗಮನ ಸೆಳೆಯುವ ನಟನಾ ಸಾಮರ್ಥ್ಯವನ್ನು ಪ್ರದರ್ಶಿಸಿದರು. ಉತ್ತಮವಾದ ಹಿನ್ನೆಲೆ ಸಂಗೀತ ಹಾಗೂ ಗಾಯನದಿಂದ ನಾಟಕದ ಘನತೆ ಏರಿತ್ತು.

ಮೂರನೆಯ ದಿನ, ಮಾರ್ಚ್ ೨೫ರಂದು ಆಡಿದ ನಾಟಕ ''ಸಂಗ್ಯಾ ಬಾಳ್ಯಾ'' ಇದು ಜನಪದ ನಾಟಕ. ಇದನ್ನು ರಚಿಸಿದವರು ಶ್ರೀ ಪತ್ತಾರ ಎಂಬುವರು. ಶ್ರೀ ಕೀರ್ತಿನಾಥ ಕುರ್ತಕೋಟಿಯವರು ಸಂಗ್ರಹಿಸಿಕೊಟ್ಟ ವಿಷಯವನ್ನು ಡಾ. ಕಂಬಾರರು ಪುನರ್ರಚಿಸಿದರು. ಈ ನಾಟಕವನ್ನು ಆಡಿಸಿದವರು. ಬೆಂಗಳೂರಿನ ರಂಗಸಂಪದ ತಂಡದವರು, ಇದರ ನಿರ್ದೇಶಕರು ಶ್ರೀ ಚಿದ್ವಿ ನಾಗೇಶ್ ಹಾಗೂ ಶ್ರೀ ಬಿ. ಎ. ರಾಮಮೂರ್ತಿಯವರು ೨೮ ವರ್ಷದ ಮೊದಲು ಮೊಟ್ಟಮೊದಲ ಬಾರಿಗೆ ಈ ನಾಟಕದ ಪ್ರಯೋಗವನ್ನು ಮುಂಬೈಯಲ್ಲೇ ಕನ್ನಡ ಕಲಾ ಕೇಂದ್ರದ ನಾಟಕೋತ್ಸವದಲ್ಲಿ ಮಾಡಿದುದಾಗಿ ಅವರು ತಿಳಿಸಿದರು.

ನಾಲ್ಕನೆಯ ದಿನ ಮಾರ್ಚ್ ೨೬ರಂದು ಕಾರ್ಯಕ್ರಮವು ''ಕಂಬಾರರ ಬದುಕು ಬರಹ''ದ ಮೇಲೆ ವಿಚಾರ ಸಂಕಿರಣದಿಂದ ಆರಂಭವಾಯ್ತು. ಇದರ ಸಂಚಾಲನೆ ಮಾಡಿದವರು ಶ್ರೀ ಡಿ. ಎನ್. ಚೌಗುಲೆಯವರು ಶ್ರೀ ಚೌಗುಲೆಯವರು ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರು. ಈ ವಿಚಾರ ಸಂಕಿರಣದಲ್ಲಿ ತಮ್ಮ ವ್ಯಾಖ್ಯಾನವನ್ನು ಮಂಡಿಸಿದವರು ಡಾ. ವಿಕ್ರಮ್ ವಿಸಾಜಿ, ಡಾ. ಅಗಸನಕಟ್ಟೆ ಪ್ರಹ್ಲಾದ ಹಾಗೂ ಡಾ. ಪಾರ್ಶ್ವನಾಥ್. ಡಾ. ವ್ಯಾಸರಾವ್ ನಿಂಜೂರು ಅಧ್ಯಕ್ಷತೆ ವಹಿಸಿದ್ದರು. ಡಾ. ವಿಸಾಜಿಯವರು 'ಚಕೋರಿ' ಕಾವ್ಯದ ಬಗೆಗೂ, ಡಾ. ಅಗಸನಕಟ್ಟೆಯವರು ''ಕಂಬಾರರ ಕಾದಂಬರಿಯಲ್ಲಿ ಗ್ರಾಮೀಣ ಚಿತ್ರ''ದ ಬಗೆಗೂ ಡಾ. ಪಾರ್ಶ್ವನಾಥರು 'ಕಂಬಾರರ ನಾಟಕಗಳ ಸಾಂಸ್ಕೃತಿಕ ನೆಲೆ'ಯ ಬಗೆಗೂ ಮಾತನಾಡಿದರು. ವಿಚಾರ ಸಂಕಿರಣ ಸಭಿಕರ ಪ್ರಶ್ನೋತ್ತರದಿಂದ ರಂಗೇರಿತು.

ನಾಲ್ಕನೆಯ ದಿನದ ನಾಟಕ 'ಹರಕೆಯ ಕುರಿ' ಇದನ್ನು ಕೂಡಾ ಬೆಂಗಳೂರಿನ 'ರಂಗ ಸಂಪದ' ತಂಡದವರೇ ಪ್ರಸ್ತುತ ಪಡಿಸಿದರು. ಇದರ ಪ್ರಮುಖ ಕಲಾಕಾರರಾಗಿ ರಂಗಮಂಚದಲ್ಲಿ ಶ್ರೀಮತಿ ಉಮಾಶ್ರೀ, ಶ್ರೀ ಬಿ.ಎಸ್. ರಾಮಮೂರ್ತಿ, ಶ್ರೀ ನವೀನ್ ಕೃಷ್ಣ ಹಾಗೂ ಶ್ರೀ ಮೈಕೊ ಚಂದ್ರು ಅವರು ಅತ್ಯಂತ ಪ್ರಭಾವೀ ಪ್ರದರ್ಶನ ನೀಡಿದರು. ಶ್ರೀ ನವೀನ್ ಕೃಷ್ಣ ಇತ್ತೀಚಿಗಷ್ಟೇ ಕಿರುತೆರೆಯಲ್ಲಿ ಹೆಸರು ಮಾಡುತ್ತಿರುವ ಯುವ ಕಲಾವಿದರು. ಇದು ಅವರ ಎರಡನೇ ರಂಗಭೂಮಿಯ ಪಾತ್ರ. ರಾಜಕೀಯ ವ್ಯವಸ್ಥೆಯಲ್ಲಿ ಕುರಿಯಾಗುವ ಸಾಧಾರಣ ಮನೆತನದ ಗೌರವಸ್ಥ ಮಹಿಳೆಯ ಅವಸ್ಥೆಯನ್ನು ಶ್ರೀಮತಿ ಉಮಾಶ್ರೀ ತುಂಬ ಪ್ರಬುದ್ಧವಾಗಿ ನಿರ್ವಹಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

ಒಟ್ಟಿನಲ್ಲಿ ನಾಲ್ಕು ದಿನ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ನೆರವೇರಿತು. ಈ ಕಾರ್ಯಕ್ರಮಕ್ಕೆ ಕರ್ನಾಟಕ ನಾಟಕ ಅಕಾಡೆಮಿ ಜಂಟಿ ನೇತೃತ್ವವನ್ನು ವಹಿಸಿ ನಾಟಕಗಳನ್ನು ಆರಿಸಿ ತಂಡದವರನ್ನು ಒಪ್ಪಿಸುವುದರಿಂದ ಹಿಡಿದು ಎಲ್ಲ ರೀತಿಯ ನೆರವನ್ನು ಕೊಟ್ಟಿದ್ದು ಅಸೋಸಿಯೇಷನ್ ಕರ್ನಾಟಕ ನಾಟಕ ಅಕಾಡೆಮಿಗೂ, ಅದರ ಅಧ್ಯಕ್ಷರಾದ ಶ್ರೀ ಕಪ್ಪಣ್ಣನವರಿಗೂ ಆಭಾರಿಯಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರಕ್ಕೂ, ಕಾರ್ಪೋರೇಷನ್ ಬ್ಯಾಂಕ್‌ನವರ ಪ್ರಾಯೋಜಕತ್ವಕ್ಕೂ ಸಹ ಅಸೋಸಿಯೇಶನ್ ಋಣಿಯಾಗಿದೆ' ಎಂದು ಅಸೋಸಿಯೇಶನ್‌ನ ಸದಸ್ಯರಾದ ಶ್ರೀ ಮಂಜುನಾಥಯ್ಯನವರು ಆಭಾರ ಮನ್ನಣೆಯಲ್ಲಿ ತಿಳಿಸಿದರು.



'ಸಾಂಬ ಶಿವ ಪ್ರಹಸನ' ನಾಟಕದ ಒಂದು ದೃಶ್ಯ



'ಸಿರಿಸಂಪಿಗೆ' ನಾಟಕದ ಒಂದು ದೃಶ್ಯ

# ಡಾ. ಕಂಬಾರರೊಡನೆ ಸಂವಾದ

ಮುಂಬೈನಾಗೆ ಯಾವದಾದ್ರೂ ಕನ್ನಡದ ಕಾರ್ಯಕ್ರಮ ಆದ್ರ ಖುಶಿಲಗುದು ಸಹಜಿಕ ಆದ ಆದ್ರ ಆ ಕಾರ್ಯಕ್ರಮ ನಾಟಕದ್ದು ಆಗಿದ್ದು ಆ ನಾಟಕದ ರಚನೆಕಾರ ಖುದ್ದಾಗಿ ಬಂದಿದ್ರ ಹೋಳಗೀನ ತುಪ್ಪದಾಗ ಬಿದ್ಹಾಂಗ ಆಗ್ತದ. ಮೊನ್ನೆ ಶುಕ್ರವಾರ ಮಾಟುಂಗೆಯ ಮೈಸೂರು ಅಸೋಸಿಯೇಷನ್‌ನಲ್ಲಿ ಚಂದ್ರಶೇಖರ ಕಂಬಾರರ ನಾಟಕೋತ್ಸವದ ಎರಡನೆ ದಿನ ನಾಡಿನ ಖ್ಯಾತಸಾಹಿತಿ, ನಾಟಕಕಾರ, ಜನಪದ ಕಲೆಯ ವಿದ್ವಾಂಸ ಡಾ|| ಕಂಬಾರ ಅವರು ಬಂದಾಗ ಹೋಳಗಿ ತುಪ್ಪದಾಗ ಬಿದ್ಹಾಂಗ ಆಗಿತ್ತು.



ರಸಿಕರೊಡನೆ ನೇರ ಸಂವಾದದಲ್ಲಿ ಪಾಲ್ಗೊಂಡಿದ್ದ ಡಾ. ಚಂದ್ರಶೇಖರ ಕಂಬಾರರು ಮತ್ತು ಸಂವಾದಕ್ಕೆ ಚಾಲನೆ ಕೊಟ್ಟ ಡಾ. ವಿಕ್ರಮ್ ವಿಸಾಜಿ

ಸರಳವಾದ ಜರಿತುರಿ ಧೋತರ, ಅಂಗಿಯನ್ನು ಹಾಕಿಕೊಂಡು ಹಸನ್ಮುಖದಿಂದ ಬಂದ ಕಂಬಾರರ ಜೊತೆಗೆ ಸಂವಾದ ನಡೆಸಲು ಬಂದವರು ಸೊಂಡೂರಿನ ಸ್ನಾತಕೋತ್ತರ ಕೇಂದ್ರದಲ್ಲಿ ಕನ್ನಡದ ಉಪನ್ಯಾಸಕರಾದ ಡಾ|| ವಿಕ್ರಮ ವಿಸಾಜಿ.


ಸರಿಸುಮಾರು ಎರಡು ತಾಸು ನಡೆದ ಕಾರ್ಯಕ್ರಮದಲ್ಲಿ ಕಂಬಾರರು ಹೇಳಿದ್ದು ಜನಪದ ಹಾಗೂ ಇತಿಹಾಸದ ನಡುವೆ ಇರುವ ಅಂತರವನ್ನು ಹೇಳುತ್ತಾ ಇತಿಹಾಸ ಏನನ್ನು ನೆನಪಿಟ್ಟುಕೊಳ್ಳಬಹುದು. ಹಾಗೂ ಏನನ್ನಾದರೂ ಮರೆಯುತ್ತದೆ. ಏಕೆಂದರೆ ಇತಿಹಾಸ ಮಾಡುವುದು ರಚನಾತ್ಮಕ ಕಾರ್ಯವಲ್ಲ ಆದರಲ್ಲಿ ಅದೇ ಕೊಲೆ ಅದೇ ಯುದ್ಧ. ಇಷ್ಟೇ ಅಲ್ಲ ಇತಿಹಾಸ ಕೆಲವೊಮ್ಮೆ ಆಳುವವನಿಗೆ ಬದ್ಧವಾಗಿರುತ್ತದೆ. ಇದಕ್ಕೆ ಉದಾಹರಣೆ ಎಂದರೆ 'ತುಘಲಕ ದಿಲ್ಲಿಂದ ದೇವಗಿರಿಗೆ ಬಂದು ಮರಳಿ ದಿಲ್ಲಿಗೆ ಹೋಗುವಾಗ ಅವನ ಹಲ್ಲು ಮುರಿದಿದ್ದನ್ನ ಇತಿಹಾಸಕಾರನಿಗೆ ಆದೇಶಿಸುತ್ತಾನೆ. ಮತ್ತು ಇತಿಹಾಸಕಾರ ಅದನ್ನು ಬರೆದು ಇಡುತ್ತಾನೆ. ಆದರೆ ಇದು ಇತಿಹಾಸದ ಪ್ರಮಾದ. ಜನಪದದಲ್ಲಿ ಹೀಗಾಗುವುದಿಲ್ಲ, ಏಕೆಂದರೆ ಜನಪದ ಎಂಬುದು ಒಂದು ನೆನಪು. ಆ ನೆನಪು ಇತಿಹಾಸವಲ್ಲ ಆದರೆ ಅದು ಪೌರಾಣಿಕವಷ್ಟೆ ಅಲ್ಲ ಏಕೆಂದರೆ ನಮ್ಮ ಪ್ರಕಾರ ಇತಿಹಾಸ ಹಾಗೂ ಪುರಾಣ ಬೇರೆ ಅಲ್ಲವೇ ಅಲ್ಲ, ಉದಾಹರಣೆಗಾಗಿ ತಿರುಪತಿ ತಿಮ್ಮಪ್ಪನ ಕಾಲ ಯಾವುದು? ಬಹುಶಃ ಪುರಾಣ ಇತಿಹಾಸದ ಅಭಿಪ್ರಾಯ ಪರಸ್ಪರ ವಿರೋಧವಾಗಿರಬಹುದು. ಆದರೆ ಜನಪದದಲ್ಲಿ ಅವನು ಯಾವ ಕಾಲದವನು ಅವನು ಮಾಡಿದ ಸಾಲ ನಾವೇಕೆ ತಿರಿಸಬೇಕು? ಇವೆಲ್ಲ ಪ್ರಶ್ನೆಗಳು ಜನಪದದಲ್ಲಿ ಪ್ರಸ್ತುತವಾಗಿ ಬಿಡುತ್ತವೆ. ಯಾಕೆಂದರೆ ಜನಪದ ಹುಟ್ಟುವುದು ಇಬ್ಬರ ನೆನಪಿನ ಮೇಲೆ, ಅವರಿಬ್ಬರ ನಡುವೆ ಇರುವ ಒಂದು ಸಾಮಾನ್ಯ ಕೊಂಡಿಯ ಮೂಲಕ. ಅದು ಒಂದೇ ಊರವರು ಆಗಿರಬಹುದು ಅಥವಾ ಒಂದೇ ಬ್ಯಾಂಕಿನವರಾಗಿರಬಹುದು. ಅಥವಾ ಬೇರೆ ಯಾವುದಾದರು ಆಗಿರಬಹುದು ಜನಪದ ತನಗೆ ಬೇಕಾದನ್ನು ಮಾತ್ರ ತೆಗೆದುಕೊಳ್ಳುತ್ತದೆ. ಯಕ್ಷಗಾನ, ದೊಡ್ಡಾಟ, ಸಣ್ಣಾಟ, ಬಯಲಾಟ, ಪಾರಿಜಾತ ಇವೆಲ್ಲ ಅದೇ ಜನಪದದಿಂದ ಬಂದದ್ದು ಉದಾಹರಣೆಗಾಗಿ ಬಯಲಾಟದಲ್ಲಿ ಒಂದೇ ಹಾಡು ಪುನರಾವರ್ತನೆ ಆದರೂ ಪ್ರೇಕ್ಷಕರಿಗೆ ಬೇಸರವಾಗುವುದಿಲ್ಲ. ಏಕೆಂದರೆ ಪ್ರತಿಸಲ ಹಾಡು ಆದಾಗಲು ಪಾರಿಜಾತದ ಕೃಷ್ಣ ಒಂದು ಸಲ ಕೃಷ್ಣ ಆದರೆ ಇನ್ನೊಮ್ಮೆ ನರಸಿಂಹ, ಮತ್ತೊಮ್ಮೆ ರಾಮನೂ ಆಗಿ ಅಭಿನಯಿಸುತ್ತಾನೆ. ಯಾಕೆಂದರೆ ಅದು ಪರಕಾಯ ಪ್ರವೇಶ ಆಗಿರುತ್ತದೆ.

ಪರಕಾಯ ಪ್ರವೇಶ ಮಾಡೋಕೆ ಎರಡು ವಿಧಾನ ಒಂದು ನೀವು ಅರ್ಜುನನಲ್ಲಿ ಹೋಗಬೇಕು ಇಲ್ಲ ನಿಮ್ಮಲ್ಲಿ ಅರ್ಜುನ ಬರಬೇಕು ಇದಾದ್ರೆ ಪಾತ್ರ ಯಶಸ್ಸು ಆಗಿದೆ ಅಂತ ಹೇಳಬಹುದು.

ಜನಪದ ದೇಹದಿಂದ ಕಣ್ಣಿಗೆ ಇಳಿಯಬೇಕಾದು ದಲ್ಲ ಆದರೆ ಅದು ಮನಸ್ಸಿನಿಂದ ಮನಸ್ಸಿಗೆ ಹೋಗಬೇಕು. ದೃಶ್ಯ ಮಾಧ್ಯಮದ ಕೌತುಕತೆ. ಇದನ್ನೇ ಬಂದು ಫ್ಯಾಶನ್ ಮಾಡಿ ಅಂತ ಹೊಸ ನಿರ್ದೇಶಕರಿಗೆ ನಾವು ಹೇಳಿದರೂ ಅವರು ಕೇಳಲಿಲ್ಲ ಎಂಬ ಅಳಲು ತೋಡಿಕೊಂಡರು.

ಜನಪದದಲ್ಲಿ ಸಂಹವನೆ ಬಗ್ಗೆ ಹೇಳುತ್ತಾ ಯಕ್ಷಗಾನದಲ್ಲಿ ಭಾಗವತ ಬಂದು ರಾವಣನು ಸೀತೆಯನ್ನು ಕದ್ದದ್ದನ್ನು ಯಾಕೇ? ಅಂತ ಕೇಳಿದಕ್ಕೆ ಬೆಳಗಿನ ತನಕ ಅದಕ್ಕೆ ಸಮರ್ಥನೆ ಕೊಡುತ್ತಿರುತ್ತಾನೆ. ಅದು ವಾಸ್ತವವಾಗಿ ಸಾಧ್ಯ ಏಕೆಂದರೆ ಆ ಪಾತ್ರದಾರಿ ತನ್ನಲ್ಲಿನ ರಾವಣನನ್ನು ಪ್ರಸ್ತುತಗೊಳಿಸುತ್ತಿದ್ದರೆ ಪ್ರೇಕ್ಷಕರು ತಮ್ಮೊಳಗಿನ ರಾಮ ಅಥವಾ ರಾವಣನ ಪಾತ್ರವನ್ನು ಪ್ರಸ್ತುತವಾಗಿಸುತ್ತ ನಾಟಕ ಅನುಭವಿಸುತ್ತಾರೆ.

ಆದರೆ ಇದಕ್ಕೆ ಬರುವ ವಿಘ್ನ ಒಂದು ವೇಳೆ ಪಾತ್ರದಾರಿಯಾಗಲಿ ಅಥವಾ ಪ್ರೇಕ್ಷಕರಾಗಲಿ ನಾಟಕದ ನೇಮೋಲ್ಲಂಘನೆ ಮಾಡಿದಾಗ ಬರುತ್ತದೆ. ಉದಾಹರಣೆಗಾಗಿ ಹರಿಶ್ಚಂದ್ರ ನಾಟಕದಲ್ಲಿ ಒಬ್ಬ ಸಹೃದಯ ಭಾವನಾತ್ಮಕ ಪ್ರೇಕ್ಷಕರೊಬ್ಬರು ಹರಿಶ್ಚಂದ್ರನ ಸಾಲ ಎಷ್ಟು ಇದೆ



ಡಾ. ಚಂದ್ರಶೇಖರ ಕಂಬಾರರೊಡನೆ ಸಂವಾದದಲ್ಲಿ ಪ್ರಶ್ನೆ ಕೇಳಲು ಡಾ. ವ್ಯಾಸರಾವ್ ನಿಂಜೂರು ನಿಂತಿದ್ದಾರೆ. ಮುಂಬೈಯ ಆಂಗ್ಲ ರಂಗಭೂಮಿಯ ಜನಪ್ರಿಯ ನಿರ್ದೇಶಕ ರಾಮು ರಾಮನಾಥನ್ ಅವರನ್ನೂ ಚಿತ್ರದಲ್ಲಿ ಕಾಣಬಹುದು.



'ಸಂಗ್ಯಾ ಬಾಳ್ಯಾ' ನಾಟಕದ ಒಂದು ದೃಶ್ಯ



'ಹರಕೆಯ ಕುರಿ' ನಾಟಕದ ಒಂದು ದೃಶ್ಯ

ನನಗ ಹೇಳಿ ನಾನು ತೀರಿಸುತ್ತೇನೆ ಎಂದುದು ನಿಯಮ ಉಲ್ಲಂಘನೆ. ಇದಾಗಬಾರದು, ಅದು ಇಬ್ಬರದೂ ಕರ್ತವ್ಯ.

ತಮ್ಮ ಸಂಗ್ಯಾ ಬಾಳ್ಯ ನಾಟಕದಲ್ಲಿನ ಬ್ರಿಟಿಶ ಸರ್ಕಾರದ ವಿರುದ್ಧ ಸಿಡಿದೇಳುವುದಕ್ಕೆ ಬ್ರಿಟಿಶ ಸರ್ಕಾರಕ್ಕೆ ಬುದ್ಧಿ ಇಲ್ಲ, ಎಂಬ ಮಾತು ಬ್ರಿಟಿಶ ಪೋಲಿಸರನ್ನು ನಾಟಕಕ್ಕೆ ಕಾವಲು ಕಾಯಲು ಕರೆಸಿತ್ತು ಎಂಬುವದು ಈ ಸಂಭವನಕ್ಕೆ ದೊಡ್ಡ ಉದಾಹರಣೆ. ಅಲ್ಲದೆ ಜನಪದ ಭವಿಷ್ಯವನ್ನು ಮಾಡುತ್ತದೆ ಎಂದರು.

ತಮ್ಮ ಸಿರಿಸಂಪಿಗೆ, ಕಾರ್ನಾಡರ ನಾಗಮಂಡಲದ ಮರುಅವತರಣಿಕೆಯೆ? ಎಂಬ ಪ್ರಶ್ನೆಗೆ ಆ ಕಥೆಯನ್ನು ಕೇಳಿದ್ದು ನಾವು ಮತ್ತು ಕೆಲ ಸಾಹಿತಿಗಳು. ಅವರಲ್ಲಿ ನಾನು ಬರೆದೆ ಗಿರೀಶ ಕಾರ್ನಾಡ ಬರೆಯುವ ವೇಳೆಗೆ ಸಿರಿಸಂಪಿಗೆ ಪ್ರಕಟವಾಗಿತ್ತು. ಆಗ ಅದನ್ನು ಮುಂಬೈನಲ್ಲಿದ್ದ ಗಿರೀಶನಿಗೆ ಕಳುಹಿಸಿ, ನೀನು ಹಯವದನ ಬರೆದಿದ್ದಿಯ ಆದರ ರೆಪಿಟೇಷನ್ ಆಗುತ್ತದೆ. ಮತ್ತು ನೀನು ನಾಗಮಂಡಲ ಬರೆಯುವ ಮುನ್ನ ನೆನಪಿಡು ಎಂದಿದ್ದೆ. ಓದಿಲ್ಲ ಅಂತ ಹೇಳಿದ ಆದರೂ ಅದು ರೆಪಿಟೇಷನ್ ಅನಿಸುತ್ತೆ.

ಉತ್ತರ ಕರ್ನಾಟಕ ಭಾಷೆ ಓದಲು ಖುಶಿ ಕೊಡುತ್ತದೆ ಆದರೆ ಬರೆಯಲು ಏಕೆ ಕಠಿಣವಾಗುತ್ತದೆ. ಎಂಬ ಪ್ರಶ್ನೆಗೆ ಹೌದು ಏಕೆಂದರೆ ಅದು ಹೃದಯದಿಂದ ಹೃದಯಕ್ಕೆ ಸಂಹವನ ನಡೆಸುತ್ತದೆ.. ಭಾವನೆಗೆ ಅಕ್ಷರದ ರೂಪ ಕೊಡುವುದು ತುಂಬಾ ತ್ರಾಸ ಬರೆ ಆದ್ರ ಅದು ಅಭ್ಯಾಸಬಲದಿಂದ ಪಳಗ್ಯದ ಅನ್ನುದಕ್ಕೆ ಎರಡು ಮಾತಿಲ್ಲ, ಎಂದು ಅಭಿಪ್ರಾಯ ಪಟ್ಟರು.

ಅದನಂತರ ಪತ್ರಿಕಾಗೋಷ್ಠಿಯಲ್ಲಿ ಮಾತಾಡಿ ಸನ್ಮಾನ ಸಮಾರಂಭ ಹಾಗೂ ಸಿರಿಸಂಪಿಗೆ, ನಾಟಕಕ್ಕಾಗಿ ಸಭಾಂಗಣಕ್ಕೆ ಬಂದಾಗ ರಾತ್ರಿ ೮.೦೦ ಗಂಟೆ ಆಗಿತ್ತು.

- ಗುರುರಾಜ ಧ್ರುವಕುಮಾರ ಗೋಕಾಕ್

# ಡಿ.ವಿ.ಜಿ. ಮತ್ತು ಸಾರ್ವಜನಿಕ ಜೀವನ

- ಎಸ್.ಆರ್. ರಾಮಸ್ವಾಮಿ

ಪ್ರಧಾನ ಸಂಪಾದಕರು, "ಉತ್ಥಾನ" ಮಾಸಪತ್ರಿಕೆ, ಬೆಂಗಳೂರು -560019

ಎಸ್. ಆರ್. ರಾಮಸ್ವಾಮಿಯವರು ಜನವರಿಯಲ್ಲಿ ನಡೆದ ಡಿ.ವಿ.ಜಿ. ಸಂಸ್ಮರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದ ವಕ್ತಾರರಲ್ಲಿ ಒಬ್ಬರು. ಅವರ ಭಾಷಣದ ಕೆಲ ಆಯ್ದ ಭಾಗಗಳ ಎರಡನೆಯ ಕಂತನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

- ಸಂ.

## ಶಾಸಕರಾಗಿ ಡಿ.ವಿ.ಜಿ.ಯವರ ಕಾರ್ಯ ನ್ಯಾಯ ವಿಧಾಯಕ ಸಭೆಯಲ್ಲಿ...

ಸರ್ ಆಲ್ಬಿಯನ್ ಬ್ಯಾನರ್ಜಿಯವರ ದಿವಾನಗಿರಿ ಕೊನೆಗೊಂಡದ್ದು 1926ರ ಏಪ್ರಿಲ್ ಅಂತ್ಯದಲ್ಲಿ. ಅಲ್ಲಿಂದಾಚೆಗೆ ಮಿರ್ಜಾ ಎಂ. ಇಸ್ಮಾಯಿಲ್ ಅವರ ದಿವಾನಗಿರಿ ಪ್ರಾರಂಭವಾಯಿತು. ಹಿಂದೆ ಡಿ.ವಿ.ಜಿ.ಯವರನ್ನು ವಿಶ್ವೇಶ್ವರಯ್ಯನವರು ಪೌರಸಭೆಯ ಸದಸ್ಯರನ್ನಾಗಿ ನೇಮಿಸಿದ್ದಂತೆ, ಇವರ ರಾಜ್ಯಶಾಸ್ತ್ರ ಪಾಂಡಿತ್ಯವನ್ನೂ ಸಾರ್ವಜನಿಕ ಸೇವೆಯನ್ನೂ ಅರಿತಿದ್ದ ಮಿರ್ಜಾ ಸರ್ಕಾರ ಇವರನ್ನು 27.5.1927ರಲ್ಲಿ ವಿಧಾನ ಪರಿಷತ್ತಿಗೆ ಸದಸ್ಯರನ್ನಾಗಿ ನೇಮಿಸಿತು.

ಆ ಸಭೆಯಲ್ಲಿ ಅಧಿಕಾರ ವರ್ಗ, ಚುನಾಯಿತರಾದ ಸದಸ್ಯರ ವರ್ಗವೊಂದಿದ್ದರೆ, ವಿಶೇಷವಾದ ವಿದ್ಯೆ, ಸಂಪತ್ತು, ಲೋಕಾನುಭವ ಮೊದಲಾದ ಕಾರಣಗಳಿಗಾಗಿ ನಿಯಮಿತರಾದ ಸದಸ್ಯರಿದ್ದರು... ಡಿ.ವಿ.ಜಿ.ಯವರಿದ್ದಂತೆ. ಪ್ರಜಾಧಿಕಾರದ ಪ್ರಾರಂಭದ ದಿನಗಳು ಅವು. ಹೀಗೆ ಡಿ.ವಿ.ಜಿ.ಯಂಥವರು ದನಿ ಎತ್ತರಿಸಿ ಪ್ರಜಾಭಿಪ್ರಾಯವನ್ನು ಮುಂದೊತ್ತಬೇಕಾಗಿ ಬಂದಿತ್ತು. ಸಭೆಯ ಕಲಾಪಗಳಿಗೆ ಅಧ್ಯಕ್ಷತೆ ವಹಿಸುತ್ತಿದ್ದ ಮಂತ್ರಿ ಕೆ. ಮ್ಯಾಥನ್ "ನಿಯಮಿತರಾದ ಸದಸ್ಯರು ಯಾವ ವಿಭಾಗವನ್ನು - ಅಂದರೆ ವ್ಯಾಪಾರ, ಪರಿಶಿಷ್ಟವರ್ಗ, ವಿದ್ಯಾಭ್ಯಾಸ ಇತ್ಯಾದಿ - ಪ್ರತಿನಿಧಿಸುತ್ತಾರೋ ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಕುರಿತು ಮಾತ್ರ ಪ್ರಶ್ನೆಗಳನ್ನು ಕೇಳಬಹುದು. ಗೊತ್ತುವಳಿಗಳನ್ನು ಕಳುಹಿಸಬಹುದು" ಎಂಬ ಅಭಿಪ್ರಾಯವನ್ನು ಹೊಂದಿದ್ದರು. ಇದನ್ನು ಪ್ರತಿಭಟಿಸಿ ಡಿ.ವಿ.ಜಿ.ಯವರು ಈ ವಿಶೇಷ ವರ್ಗದ ಸದಸ್ಯರೂ ಎಲ್ಲ ವಿಷಯಗಳನ್ನೂ ಕುರಿತು ಸಭೆಯಲ್ಲಿ ಕಲಾಪಗಳಲ್ಲಿ ಭಾಗವಹಿಸಬಹುದೆಂದು ವಾದಿಸಿದರು. ನ್ಯಾಯದಾಯಕ ಸಭೆಯಲ್ಲಿ 28.6.1929ರಂದು ಡಿ.ವಿ.ಜಿ. ದೃಢವಾಗಿ ಪ್ರತಿಪಾದಿಸಿದರು

"I think that Government nominated me not to represent the Government but to represent the public and I represent the public according to my Light. I interpret the Rule according to my understanding and not according to Governmen's understanding" ಎಂದು ಹೇಳಿ ಮಂತ್ರಿಗಳ ಬಾಯಿ ಮುಚ್ಚಿಸಿದರು.

ಮಿರ್ಜಾ ಅಧಿಕಾರಾವಧಿಯ ಒಂದು ಪ್ರಮುಖ ಘಟನೆ 1928ರ ಗಣಪತಿ ಗಲಭೆ. ಇದು ಪ್ರಸಿದ್ಧವಾಗಿರುವುದರಿಂದ ಇಲ್ಲಿ ಅದನ್ನು ವಿಸ್ತರಿಸುವುದಿಲ್ಲ.

ಬೆಂಗಳೂರು ಅರ್ಕಾಟ್ ಶ್ರೀನಿವಾಸಾಚಾರ್ಯ ರಸ್ತೆಯಲ್ಲಿ ಮುನಿಸಿಪಾಲಿಟಿಗೆ ಸೇರಿದ ಹಳೆಯ ಕಟ್ಟಡ ಒಂದಿತ್ತು, ಅದರಲ್ಲಿ ಎಸ್. ಆರ್. ನಂಜುಂಡಯ್ಯನವರ ಸ್ಕೂಲು ಭಾಗಶಃ ಕೆಲಸ ಮಾಡುತ್ತಿತ್ತು. ಆ ಕಟ್ಟಡದ ಎದುರಿಗೆ ಪ್ರಸಿದ್ಧರಾದ ಮಹಮದ್ ಅಬ್ಬಾಸ್ ಖಾನ್ ಅವರ ಮನೆ. ಸ್ಕೂಲ್ ಕಟ್ಟಡದ ಆವರಣದಲ್ಲಿ ಒಂದು ಗಣಪತಿಯ ಶಿಲಾವಿಗ್ರಹ ಎಷ್ಟೋ ಕಾಲದಿಂದ ಇತ್ತು. ಅದು ಇದ್ದಕ್ಕಿದ್ದ ಹಾಗೆ ಯಾವ ಕಾರಣದಿಂದಲೋ ಸ್ಥಾನಾಂತರ ಹೊಂದಿ ಒಂದು ಕೋಣೆಯನ್ನು ಸೇರಿಬಿಟ್ಟಿತು. ಇದು ಹೀಗಾದದ್ದನ್ನು 'ವೀರಕೇಸರಿ' ಮೊದಲಾದ ಪತ್ರಿಕೆಗಳು ಬಲವಾಗಿ ಟೀಕಿಸಿದವು. ಅಧಿಕಾರಿಗಳ ದುರ್ಲಕ್ಷ್ಯ ಮೊದಲಾದ ಕಾರಣಗಳಿಂದಾಗಿ, ಬೆಂಗಳೂರು ಅದುವರೆಗೆ ನೋಡದಿದ್ದಂಥ ಗಲಭೆ ಜನಸಂಘರ್ಷಗಳು ನಡೆದವು.

ಜವಾಬ್ದಾರಿ ಸರಕಾರವಿಲ್ಲದಿದ್ದ ಕಾರಣದಿಂದಲೇ ಇಷ್ಟೆಲ್ಲ ಅನಾಹುತ ಆಯಿತು ಎಂಬುದು ಡಿ.ವಿ.ಜಿ.ಯವರ ವಿಶ್ಲೇಷಣೆಯಾಗಿತ್ತು. ಸಾರ್ವಜನಿಕ ಅಭಿಪ್ರಾಯವನ್ನು ಕುರಿತು ಅವರು ಹೇಳಿರುವ ಮಾತುಗಳು ಇಂದಿಗೂ ಮನನೀಯವಾಗಿವೆ.

ಡಿ.ವಿ.ಜಿ. 'ಗಣಪತಿ ಪ್ರಸಂಗದ ಗೂಢಾರ್ಥ' ಎಂದು ಬರೆದ ಲೇಖನ 7.1.1929ರ 'ವಿಶ್ವ ಕರ್ನಾಟಕ'ದಲ್ಲಿ ಪ್ರಕಟವಾಯಿತು. 'ಗಣಪತಿ ಗಲಭೆಗಳು ನಮಗೊಂದು ಎಚ್ಚರಿಕೆಯಾಗಿರಬೇಕು. ನಮ್ಮ ಮೈಸೂರು ಸಕಲ ಕಲ್ಯಾಣ ಪರಿಪೂರ್ಣವಾಗಿದೆ! ನಮ್ಮ ಸಮಾನ ಯಾವ ಸಂಸ್ಥಾನದವರೂ ಇಲ್ಲ! ನಮಗೆ ಬೇಕಾದುದೆಲ್ಲಾ ಸಿದ್ಧವಾಗಿಯೇ ಇದೆ. ಇನ್ನು ನಮಗೆ ವಿಚಾರವೇಕೆ - ಎಂಬ ಸ್ಥಿತಿಯಲ್ಲಿ ನಾವು ಮೈಮರೆತಿದ್ದೆವು. ಆದರೆ ಮಾವಿನ ಹಣ್ಣಿನ ಹೊರಗಣ ಬಣ್ಣ ಹೊಳೆಯುತ್ತಿರುವ ಮಾತ್ರದಿಂದ ಒಳಗಡೆ ತಿರುಳು ಕೊಳೆತಿಲ್ಲವೆಂದು ಖಂಡಿತವಾಗುವುದಿಲ್ಲ. ಮನೆಯ ಹೊರಗಿನ ಶಿಖರ ಹೊಳೆಯುತ್ತಿರಬಹುದು. ಒಳಗಿನ ಕಂಭ ಅಲ್ಲಾಡುತ್ತಿರಬಹುದು. ಒಂದು ಮಳೆಯ ಹೊಡೆತ ಬಂದರೆ ಆಗ ಶಿಖರ ಮುಖ್ಯವೋ ಕಂಭ ಮುಖ್ಯವೋ ಗೊತ್ತಾಗುತ್ತದೆ. ಅದೆ ಪ್ರಕಾರವಾಗಿ ಈ ಗಲಭೆಗಳಿಂದ ನಮ್ಮ ರಾಜ್ಯಸಂಸ್ಥೆ ಎಷ್ಟು ಭದ್ರವಾಗಿದೆ, ನಮ್ಮ ಅಧಿಕಾರವರ್ಗದ ಪ್ರತಿಷ್ಠೆ ಎಷ್ಟು ಆಳವಾಗಿದೆ - ಎಂಬುದು ಈಗ ವ್ಯಕ್ತಪಟ್ಟಿದೆ. ನಮ್ಮ ಸರ್ಕಾರದ ನಾನಾ ಇಲಾಖೆಗಳಲ್ಲಿಯೂ ಕೋರ್ಟು ಕಛೇರಿಗಳಲ್ಲಿಯೂ ಅನೇಕ ಕುಂದುಗಳಿವೆ ಎಂಬುದು ಈಗ ಸ್ಪಷ್ಟವಾಗಿದೆ. ಇನ್ನಾದರೂ ನಮ್ಮ ಜನರು ಅಲ್ಪ ವಿಚಾರಗಳನ್ನು ಒತ್ತಟ್ಟಿಗಿಟ್ಟು ದೊಡ್ಡ ವಿಚಾರಗಳನ್ನು ಆಲೋಚನೆಗೆ ತೆಗೆದುಕೊಳ್ಳಬೇಕು. ಚಿಲ್ಲರೆ ಜಾತಿಗಳ ಹೋರಾಟದ ನಡುವೆ ಭಾರಿ ಪ್ರಸಂಗಗಳನ್ನು ಮರೆತು ಹೋಗಬಾರದು. ಈ ರೀತಿಯು ನಮ್ಮ ಮಹಾಜನದ ಅವಗಾಹನೆಗೆ ಬಂದು ಅವರ ಮುಖಂಡರು ಸಾರ್ವಜನಿಕ ದೃಷ್ಟಿಯಿಂದ ರಾಜಕೀಯ ಸಂಸ್ಥೆಗಳನ್ನೂ ಕ್ರಮಗಳನ್ನೂ ಉತ್ತಮಪಡಿಸುವ ಕೆಲಸಕ್ಕೆ ಕೈಹಾಕುವಂತಾದರೆ ಮಾತ್ರ ಗಣಪತಿಯು ನಮ್ಮ ರಾಜ್ಯದಲ್ಲಿ ಒಂದು ಶುಭ ಸಮಾರಂಭವನ್ನೇ ಮೊದಲು ಮಾಡಿಸಿರುವನೆಂದು ನಾವು ಸಂತೋಷಪಡಬಹುದು.''

***

ಅಗ್ಗದ ಜನಪ್ರಿಯತೆಯ ಬೆನ್ನುಹತ್ತದೆ ಹಲವೊಮ್ಮೆ ಹಲವು ಪ್ರಮುಖ ಜನವರ್ಗಗಳಿಗೆ ಅಪ್ರಿಯವೆನಿಸಬಹುದಾದ ನಿಲವುಗಳನ್ನು ಡಿ.ವಿ.ಜಿ. ಪ್ರತಿಪಾದಿಸಲು ಹಿಂದೆಗೆಯುತ್ತಿರಲಿಲ್ಲ. ಉದಾಹರಣೆಗೆ: 27.7.1935 ರಂದು ಬಾಲ ವಿವಾಹ ನಿರೋಧ ಕಾನೂನೊಂದನ್ನು ತರಬೇಕೆಂಬ ಗೊತ್ತುವಳಿಯೊಂದು ವಿಧಾನ ಸಭೆಯ ಮುಂದೆ ಬಂದಿತ್ತು. ಬಾಲ ವಿವಾಹದ ಆಚರಣೆಯನ್ನು ತಾವು ಸಂಪೂರ್ಣವಾಗಿ ವಿರೋಧಿಸುವವರಾಗಿದ್ದರೂ, ಆ ಗೊತ್ತುವಳಿಗೆ ತಾವು ಬೆಂಬಲ ನೀಡುವುದಿಲ್ಲವೆಂದು ಡಿ.ವಿ.ಜಿ. ಹೇಳಿದರು. ಸರಿಯಾಗಿಯೋ ತಪ್ಪಾಗಿಯೋ ನಮ್ಮ ಜನ ಕೆಲವು ವಿಚಾರಗಳನ್ನು ಶಾಸ್ತ್ರಸಮ್ಮತವೆಂದು ನಂಬಿಕೊಂಡಿದ್ದಾರೆ, ಅಂಥ ನಂಬಿಕೆಗಳ ಮೇಲೆ ಸರ್ಕಾರ ಕೈ ಮಾಡಲಾಗದು. ಪಾಶ್ಚಾತ್ಯ ದೇಶಗಳಲ್ಲಿ ಕೂಡ ಇಂಥ ಪದ್ಧತಿಗಳು ವೈಜ್ಞಾನಿಕ ಬೆಳವಣಿಗೆಯ ಪರಿಣಾಮವಾಗಿ ತಪ್ಪಿಹೋದದ್ದು ಇತ್ತೀಚೆಗಷ್ಟೆ. ಹಾಗೆ ಆಧುನಿಕತೆ ಬೇರೂರಿದಂತೆಲ್ಲ ಇಂಥ ಪದ್ಧತಿಗಳು ತಾವಾಗಿ ಹೊರಟು ಹೋಗುತ್ತವೆ. ಅದಕ್ಕೆ ಅವಕಾಶ ಕೊಡೋಣ. ಶಾಸನದ ಮೂಲಕ ಇಂಥ ಸಮಸ್ಯೆಗಳಿಗೆ ಕೈಯಿಟ್ಟರೆ ವಿರುದ್ಧ ಪರಿಣಾಮಗಳೇ ಆಗುತ್ತವೆ - ಎಂದು ಡಿ.ವಿ.ಜಿ. ವಾದಿಸಿದರು.

ಆದರೆ ಹರಿಜನರ ದೇವಾಲಯ ಪ್ರವೇಶವನ್ನು ಕುರಿತು ಗೊತ್ತುವಳಿಯೊಂದು ಸಭೆಯ ಮುಂದೆ ಬಂದಾಗ (26.1.1937) ಡಿ.ವಿ.ಜಿ. ಅದನ್ನು ಬೆಂಬಲಿಸಿದರು. ತಿರುವಾಂಕೂರಿನಲ್ಲಿ ಇದನ್ನು ಕುರಿತು ಮಸೂದೆಗೆ ಬೆಂಬಲವೂ ವಿರೋಧವೂ ಇರುವುದನ್ನು ಪ್ರಸ್ತಾವಿಸಿ, ''I appeal to the government that in this matter they have got to take note of the spirit of the times and make what reasonable move they could towards meeting the wishes of the reformers'' ಎಂದು ವಿನಂತಿ ಮಾಡಿದರು.

1930ರ ದಶಕದಲ್ಲಿ ಮೈಸೂರಿನಲ್ಲಿ ರಾಜಕೀಯವಾಗಿ ಒಂದು ರೀತಿಯ Stalemate ಉಂಟಾಗಿತ್ತು. ಕಾಂಗ್ರೆಸಿನ ಮುಖಂಡರಾದ ನೆಹರು, ಗಾಂಧಿ ಪಟೇಲ್ ಇವರಿಗೂ ಮಿರ್ಜಾ ಸಾಹೇಬರವರಿಗೂ ಪತ್ರವ್ಯವಹಾರ ನಡೆಯುತ್ತಿತ್ತು.

ಇಲ್ಲಿ ಸ್ಮರಿಸಬೇಕಾದ ಸಂಗತಿಯೆಂದರೆ - ಆ ಪಟೇಲ್ - ಮಿರ್ಜಾ ಒಪ್ಪಂದ ಸಂಧಾನದಲ್ಲಿ ಬಹು ಮುಖ್ಯ ಪಾತ್ರ ವಹಿಸಿದ್ದವರು ಡಿ.ವಿ.ಜಿ. ಮತ್ತು ಹರಿಜನ ಸೇವಕ ಸಂಘದ ಬ್ರಹ್ಮಚಾರಿ ರಾಮಚಂದ್ರ ಅವರು. ಅವರು ಮಾಡಿದ ಇಂತಹ ಕೈಂಕರ್ಯಗಳು ಯಾವ ಚರಿತ್ರಗ್ರಂಥದಲ್ಲಿಯೂ ಉಲ್ಲೇಖಗೊಳ್ಳದೆ ಮರೆಯಾಗಿ ಹೋಗಿವೆ.

***

ಮತಾಂತರಗಳಿಂದಾಗಿ ಸಾಮಾಜಿಕ ಸಾಮರಸ್ಯ ಕೆಡುತ್ತಿದ್ದುದಕ್ಕೆ ಸ್ವಲ್ಪ ಪರಿಹಾರವನ್ನು ತರಲು ಡಿ.ವಿ.ಜಿ. ಮತಾಂತರಗಳನ್ನು ರಿಜಿಸ್ಟರ್ ಮಾಡುವ ವಿಧಾನವೊಂದನ್ನು ಕಾನೂನು ನಿಗದಿಪಡಿಸಬೇಕೆಂದು ಗೊತ್ತುವಳಿಯೊಂದನ್ನು ತಂದಿದ್ದರು. ಹೀಗೆ ಆ ವ್ಯವಹಾರಗಳಲ್ಲಿ transparency ಇರಬೇಕು ಎಂಬುದೇ ಅವರ ಇಂಗಿತವಾಗಿತ್ತು.

ಈ ಗೊತ್ತುವಳಿ ವಿಧಾನ ಪರಿಷತ್ತಿನೊಳಗೂ ದೇಶದ ಇತರ ಕಡೆಗಳಲ್ಲಿಯೂ ಬಿರುಗಾಳಿಯನ್ನೇ ಎಬ್ಬಿಸಿತು. ಡಿ.ವಿ.ಜಿ. ಮಂಡಿಸಿದ ಆ ಸತರ್ಕವಾದ ಗೊತ್ತುವಳಿಗೆ ಬೆಂಬಲ ದೊರೆಯಲಿಲ್ಲ. ಇಂದಿಗೂ ಮತಾಂತರ ಪ್ರಶ್ನೆಯು ದೇಶದ ಮುಂದೆ ಆಗಾಗ ಬರುತ್ತಲೇ ಇದೆ. ಡಿ.ವಿ.ಜಿ. ಜೀವಿಸಿರುವವರೆಗೂ ತಮ್ಮ ಸೂಚನೆಯನ್ನು ಪುನರುಚ್ಚರಿಸುತ್ತಲೇ ಬಂದಿದ್ದರೂ ಅದಕ್ಕೆ ಸಿಕ್ಕಬೇಕಾದ ಪ್ರಾಮುಖ್ಯತೆ ಸಿಗಲಿಲ್ಲ.

**ರಾಜಕೀಯ ಸುಧಾರಣಾ ಸಮಿತಿಯಲ್ಲಿ**

ಸಂಸ್ಥಾನದಲ್ಲಿ ಮತ್ತಷ್ಟು ರಾಜಕೀಯ ಸುಧಾರಣೆಗಳನ್ನು ಮಾಡುವ ವಿಚಾರವನ್ನು ಪರಿಶೀಲಿಸಲು ಮೈಸೂರು ಸರ್ಕಾರ 1938ರಲ್ಲಿ ಕೆ. ಆರ್. ಶ್ರೀನಿವಾಸ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿತು. ಅದರ ಸದಸ್ಯರ ಪೈಕಿ ಡಿ.ವಿ.ಜಿ.ಯವರೂ ಒಬ್ಬರಾಗಿದ್ದರು. ಡಿ.ವಿ.ಜಿ.ಯವರು ಆ ಸಭೆಯಲ್ಲಿ ಮಾಡಿದ ಭಾಷಣಗಳು ಅವರು ವಿಚಾರವನ್ನು ಕುರಿತು ಎಷ್ಟು ಆಳವಾಗಿ ಯೋಚನೆ ಮಾಡಿದ್ದರೆಂಬುದನ್ನು ತೋರಿಸುತ್ತವೆ.

''ಜವಾಬ್ದಾರಿ ಸರಕಾರವೆ ನಮ್ಮ ಗುರಿಯೆಂದು ನಾವು ಒಪ್ಪಬೇಕು. ಆದರೆ ಈ ಕೂಡಲೇ ಅಂಥ ಸರಕಾರ ಜಾರಿಗೆ ಬರಬೇಕೆಂದು ನಾನು ಕೇಳಲಾರೆ. ಏಕೆಂದರೆ ಆ ಗುರಿಯತ್ತ ಸಾಗುವಾಗ ನಾವು ತಪ್ಪು ಹೆಜ್ಜೆಗಳನ್ನಿಡಬಾರದು. ಅದು ಒಂದು ಏಣಿಯ ಮೇಲೆ ಹತ್ತುವಂಥಾದ್ದು, ನೀವು ಒಂದು ಹಂತವನ್ನು ತಪ್ಪಿದರೆ, ನೀವು ಮೊದಲು ಇದ್ದ ಹಂತಕ್ಕಿಂತ ಕೆಳಗಿನದಕ್ಕೆ ಹೋಗಿಬಿಡಬಹುದು. ಜವಾಬ್ದಾರಿ ಸರಕಾರ ಬೇಕೆಂದು ಹೇಳುವಾಗ ನಾನು ಅದರ (ಪುಟ 11ಕ್ಕೆ)

# ಕನ್ನಡ ಸಂಶೋಧನೆ ಮತ್ತು ಡಾ. ಚಿಟಗುಪ್ಪಿ

ಡಾ. ಭೀಮರಾವ್ ಚಿಟಗುಪ್ಪಿ ಅವರು ಕನ್ನಡದ ಪ್ರಮುಖ ಸಂಶೋಧಕರಲ್ಲಿ ಒಬ್ಬರು. ದೂರದ ಮುಂಬಯಿಯಲ್ಲಿದ್ದು ಕೊಂಡು ಅವರು ನಡೆಸಿದ ಸಂಶೋಧನಾ ಕಾರ್ಯ ಯಾರನ್ನೂ ಬೆರಗುಗೊಳಿಸುತ್ತದೆ. ಡಾ. ಚಿಟಗುಪ್ಪಿ ಅವರ ಮೂರು ಸಂಶೋಧನಾ ಕೃತಿಗಳ ಸಂಕ್ಷಿಪ್ತ ಅವಲೋಕನವಿಲ್ಲಿದೆ.

- ಡಾ. ಜಿ.ಎನ್. ಉಪಾಧ್ಯ

ಕನ್ನಡದ ಹೆಸರಾಂತ ಸಂಶೋಧಕರಲ್ಲಿ ಡಾ. ಭೀಮರಾವ್ ಚಿಟಗುಪ್ಪಿ ಅವರೂ ಒಬ್ಬರು. ಕನ್ನಡ ಸಾಹಿತ್ಯ ಸಂಸ್ಕೃತಿಯ ಕುರಿತು ವಿಶೇಷವಾದ ಆಸ್ಥೆಯನ್ನು ಇಟ್ಟುಕೊಂಡಿದ್ದ ಅವರು ಸಂಶೋಧನೆಯನ್ನು ವ್ರತವಾಗಿ ಸ್ವೀಕರಿಸಿದವರು. 1935 ರಲ್ಲೇ ಭೀಮರಾವ್ ಚಿಟಗುಪ್ಪಿ ಅವರ ಸಂಶೋಧನೆಯ ಒಲವು ಬಲಿಯಿತು. ನಾಮಾಂಕಿತ ಇತಿಹಾಸ ತಜ್ಞ ಫಾದರ್ ಹೆರಾಸ್ ಅವರೊಂದಿಗೆ ಓಡಾಡಿಕೊಂಡಿದ್ದ ಅವರು ತಮ್ಮ ಎಂ.ಎ. ಪದವಿಗಾಗಿ ಬಾದಾಮಿ ಚಾಳುಕ್ಯರ ಬಗೆಗೆ ಶೋಧ ಪ್ರಬಂಧವನ್ನು ಬರೆದು ವಿದ್ವಾಂಸರ ಗಮನ ಸೆಳೆದರು. ಬಹುಕಾಲ ಮುಂಬಯಿ ಸರಕಾರದ ಉನ್ನತ ಅಧಿಕಾರಿಯಾಗಿ ಸೇವೆ ಸಲ್ಲಿಸಿದ ಅವರು ತಮ್ಮ ನಿವೃತ್ತಿಯ ಅನಂತರ ಕನ್ನಡ ಸಂಶೋಧನೆಗೆ ಧುಮುಕಿದರು. ಡಾ. ಚಿಟಗುಪ್ಪಿ ಅವರು ಸಂಶೋಧನಾ ರಂಗದಲ್ಲಿ ಕಾಲಿಟ್ಟದ್ದು ತಮ್ಮ 60ನೆಯ ವರ್ಷ ದಾಟಿದ ಮೇಲೆಯೇ. ''ನಮ್ಮಲ್ಲಿಯ ಎಷ್ಟೋ ಜನ ವಿದ್ವಾಂಸರು, ಪ್ರೊಫೆಸರುಗಳು ಆ ವಯಸ್ಸಿಗೆ ಅದು ಇದನ್ನು ಬರೀತಿರುತ್ತಾರೆ. ಆದರೆ ಮೌಲಿಕ ಸಂಶೋಧನೆಯನ್ನು ನಿಲ್ಲಿಸಿರುತ್ತಾರೆ'' ಎಂದು ಹಿರಿಯ ಸಂಶೋಧಕ ಡಾ. ಶ್ರೀನಿವಾಸ ಹಾವನೂರ ಅವರು ಅಭಿಪ್ರಾಯ ಪಟ್ಟಿದ್ದಾರೆ.

ಡಾ. ಚಿಟಗುಪ್ಪಿ ಅವರದು ಬಹುಭಾಷಿಕ ಸಂವೇದನೆ. ಪ್ರಾಚೀನ ಭಾರತೀಯ ಸಾಹಿತ್ಯವನ್ನು ಅವರು ಚೆನ್ನಾಗಿ ಓದಿಕೊಂಡಿದ್ದರು. ಕನ್ನಡ, ಸಂಸ್ಕೃತ, ಮರಾಠಿ, ಪ್ರಾಕೃತ, ಇಂಗ್ಲಿಷ್ ಭಾಷೆಯ ಕೃತಿಗಳನ್ನು ಆಕರವಾಗಿಟ್ಟುಕೊಂಡು ಅವರು ತಮ್ಮ ವಿಚಾರ ಸರಣಿಗಳನ್ನು ಮಂಡಿಸುತ್ತಿದ್ದರು. ಅವರ ಬಹುತೇಕ ಸಂಶೋಧನಾ ಬರಹಗಳೆಲ್ಲಾ ಒಂದು ರೀತಿಯ ತೌಲನಿಕ, ಅಂತರ್ ಶಿಸ್ತೀಯ ಅಧ್ಯಯನಗಳೇ ಆಗಿವೆ. ಸಂಶೋಧಕನಿಗೆ ತಾನು ಎತ್ತಿಕೊಂಡ ವಿಷಯದಲ್ಲಿ ಶ್ರದ್ಧೆ ಹಾಗೂ ಪ್ರಾಮಾಣಿಕತೆಗಳಿರಬೇಕೆಂದು ಅವರು ನಂಬಿಕೊಂಡಿದ್ದರು. ಕವಿರಾಜ ಮಾರ್ಗ ಪ್ರಶಸ್ತಿ ಕೃತಿಯ ಆರಂಭದಲ್ಲಿ ಅವರು ಹೇಳಿದ ಮಾತು ಚಿಂತನೀಯವಾಗಿದೆ. ''ಭಾರತೀಯ ಕಾವ್ಯಶಾಸ್ತ್ರವೊಂದು ಗಹನ ಮತ್ತು ಗಂಭೀರ ವಿಷಯ ಅದರಲ್ಲಿ ಹುಟ್ಟಿಕೊಂಡ ರಸ, ಅಲಂಕಾರ, ಧ್ವನಿ ಮೊದಲಾದ ಪ್ರಸ್ಥಾನಗಳು ಅದನ್ನು ಮತ್ತಿಷ್ಟು ಜಟಿಲಗೊಳಿಸಿವೆ. ಕವಿರಾಜ ಮಾರ್ಗ ಇಂಥದೊಂದು ಗ್ರಂಥ. ತಕ್ಕ ಜ್ಞಾನ ಅನುಭವಗಳಿಲ್ಲದೆ ಇಂಥ ಗ್ರಂಥಕ್ಕೆ ಕೈ ಹಚ್ಚುವುದು ಸಾಹಸವೇ ಸೈ. ಜಿಜ್ಞಾಸೆ, ಪರಿಶ್ರಮ ಇವೆರಡನ್ನು ಬಿಟ್ಟರೆ ಈ ಕಾರ್ಯಕ್ಕೆ ಅಗತ್ಯವಿರುವ ಇತರ ಅರ್ಹತೆನನ್ನಲ್ಲಿಲ್ಲ'' ಎಂದವರು ಪ್ರಾಂಜಲವಾಗಿ ಹೇಳಿಕೊಂಡಿದ್ದಾರೆ. ಸರಕಾರಿ ಫೈಲುಗಳ ನಡುವೆ ತಲೆ ಹುಗಿದುಕೊಂಡಿದ್ದು ಅವರು ನಡೆಸಿದ ಸಂಶೋಧನ ಕೃಷಿ ಯಾರನ್ನೂ ಬೆರಗುಗೊಳಿಸುತ್ತದೆ. ಡಾ. ಚಿಟಗುಪ್ಪಿ ಹೆಚ್ಚು ಬರೆದವರಲ್ಲ. ಆದರೆ ಬರೆದದ್ದೆಲ್ಲ ಚೊಕ್ಕ ಚಿನ್ನವೇ ಆಗಿದೆ ಎಂಬುದು ಅಭಿಮಾನದ ಸಂಗತಿ. ಸಂಶೋಧನೆಗಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಅವರಿಗೆ 1986ರಲ್ಲಿ ಮುಂಬೈ ವಿ.ವಿ. ಡಿ.ಲಿಟ್ ಪದವಿಯನ್ನು ನೀಡಿ ಗೌರವಿಸಿದ್ದು (ಆಗ ಅವರಿಗೆ 81ಹರೆಯ) ಸಾಮಾನ್ಯ ಸಂಗತಿಯಲ್ಲ. ಡಾ. ಚಿಟಗುಪ್ಪಿಯವರ ಸಂಶೋಧನಾ ಕಾರ್ಯಗಳನ್ನು ಹತ್ತಿರದಿಂದ ಕಂಡ ಡಾ. ಹಾವನೂರ ಅವರು 'ಅವರ ಸಂಶೋಧನಾ ಕಾರ್ಯದ ಮೂಲಸೂತ್ರವೆಂದರೆ ಭಾರತೀಯ ಕಾವ್ಯ ಶಾಸ್ತ್ರದ ಪರಂಪರೆಯಲ್ಲಿ ಹಳೆಗನ್ನಡ ಸಾಹಿತ್ಯದ ವಿವೇಚನೆ. ಈ ಕ್ಷೇತ್ರದಲ್ಲಿ ಹೊಸ ಅಂಶಗಳನ್ನು ಗುರುತಿಸುವುದಕ್ಕೂ ಅನಿರ್ಣಿತವಿದ್ದವುಗಳ ಮೇಲೆ ಬೆಳಕು ಚೆಲ್ಲುವುದಕ್ಕೂ ಬೇಕಾದಷ್ಟು ಅವಕಾಶವಿದೆ. ಲಭ್ಯವಿರುವ ನಿಶ್ಚಿತಾಂಶಗಳು, ಯುಕ್ತ ಗ್ರಹಿಕೆ ಮತ್ತು ಊಹೆ ಇವು ಮೂರರ ಸಂಗಮ ಅವರ ಬಹುತರ ಎಲ್ಲ ಸಂಶೋಧನೆಗಳಲ್ಲಿ ಕಂಡು ಬರುತ್ತದೆ'' ಎಂಬುದಾಗಿ ಅಭಿಪ್ರಾಯ ಪಟ್ಟಿದ್ದಾರೆ.

ಕವಿರಾಜ ಮಾರ್ಗ ಪ್ರಶಸ್ತಿ(1972): ಇದು ಡಾ. ಭೀಮರಾವ್ ಚಿಟಗುಪ್ಪಿ ಅವರ ವಿದ್ವತ್ತನ್ನು ಲೋಕಮುಖಕ್ಕೆ ಪರಿಚಯಿಸಿದ ಕೃತಿ. ಮನ್ನಂತರ ಪ್ರಕಾಶನ ಈ ಕೃತಿಯನ್ನು ಹೊರತರುವುದಕ್ಕೆ ಹೆಮ್ಮೆ ಪಡುತ್ತದೆ. ಇದೊಂದು ಅಪರೂಪದ ಒಳ್ಳೆಯ ಕೃತಿ ಎಂಬುದಾಗಿ ಸಂಪಾದಕ ಜಿ.ಬಿ.ಜೋಶಿ ಅವರು ಮೆಚ್ಚಿಕೊಂಡಿರುವುದನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತ. ಕವಿರಾಜ ಮಾರ್ಗ ಕರ್ತೃತ್ವದ ಬಗೆಗೆ ಕನ್ನಡದಲ್ಲಿ ಬಂದ ಎಲ್ಲ ವಾದ ವಿವಾದಗಳನ್ನು ಗಮನಿಸಿ ತಮ್ಮದೇ ಆದ ಒಂದು ಸಮಂಜಸವಾದ ಸರಣಿಯನ್ನು ಪ್ರಸ್ತುತ ಶೋಧಕೃತಿಯಲ್ಲಿ ಡಾ. ಚಿಟಗುಪ್ಪಿ ಅವರು ತೆರೆದಿಟ್ಟಿದ್ದಾರೆ. ಕವಿರಾಜ ಮಾರ್ಗ ಕೃತಿಯ ಮಹತ್ವ ಹಾಗೂ ಅದರ ಆಳ ಅಗಲ ವೈಭವಗಳ ದರ್ಶನವನ್ನು ಡಾ. ಚಿಟಗುಪ್ಪಿ ಅವರು ಇಲ್ಲಿ ಸಮರ್ಥವಾಗಿ ಮಾಡಿದ್ದಾರೆ.

ಕವಿರಾಜ ಮಾರ್ಗವು ಕಾವ್ಯಶಾಸ್ತ್ರವನ್ನು ಕುರಿತಿರುವ ಗ್ರಂಥ, ಕನ್ನಡ ವಾಙ್ಮಯದಲ್ಲಿ ಇದುವರೆಗೆ ದೊರೆತ ಗ್ರಂಥಗಳಲ್ಲಿ ಪ್ರಪ್ರಥಮ ಮತ್ತು ಪ್ರಾಚೀನತಮ ಗ್ರಂಥ. ಕನ್ನಡದಲ್ಲಿ ಇರುವುದೆಲ್ಲ ಸಂಸ್ಕೃತದಲ್ಲಿ ಇರುವುದರ ಪ್ರತಿಬಿಂಬ. ಅದರಲ್ಲಿ ಹೊಸದೇನುಬಂದಿಲ್ಲ ಎಂಬ ಮಾತಿದೆ. ಕವಿರಾಜ ಮಾರ್ಗ ಇಂಥದಲ್ಲ. ಒಂದೊಮ್ಮೆ ಸಂಸ್ಕೃತದಲ್ಲಿ ಇದ್ದಿದ್ದರೆ ಭಾಮಹ, ದಂಡಿ ಮೊದಲಾದ ಸುಪ್ರಸಿದ್ಧ ಲಾಕ್ಷಣಿಕರೊಂದಿಗೆ ಕವಿರಾಜಮಾರ್ಗಕಾರನೂ ಒಬ್ಬ ಗಣ್ಯ ವ್ಯಕ್ತಿಯಾಗುತ್ತಿದ್ದ ಎಂಬುದು ಈ ಪ್ರಶಸ್ತಿಯ ಪ್ರಧಾನ ಶ್ರುತಿ ಎಂಬುದಾಗಿ ಕೃತಿಯ ಮುನ್ನುಡಿಯಲ್ಲಿ ಅವರೇ ಹೇಳಿಕೊಂಡಿದ್ದಾರೆ. ಕವಿರಾಜ ಮಾರ್ಗವು ಕನ್ನಡದಲ್ಲಿದ್ದರೂ ಕನ್ನಡ ಕಾವ್ಯ ರಚನೆಗೆ ಸಂಬಂಧಿಸಿದ್ದರೂ, ಸಮಗ್ರ ಭಾರತೀಯ (ಸಂಸ್ಕೃತ) ಕಾವ್ಯ ಮೀಮಾಂಸೆಗೆ ಒಂದು ಬೆಲೆಯುಳ್ಳ ಕಾಣಿಕೆ ಎಂಬುದನ್ನು ಕುತೂಹಲಪೂರ್ಣವಾಗಿ ಸೋದಾಹರಣವಾಗಿ ವಿವರಿಸಿರುವುದು ಡಾ. ಚಿಟಗುಪ್ಪಿ ಅವರ ಪಾಂಡಿತ್ಯಕ್ಕೆ ನಿದರ್ಶನವಾಗಿದೆ. ಉಪಲಬ್ಧವಿರುವ ಕನ್ನಡ ಕೃತಿಗಳಲ್ಲಿ ಆದ್ಯ ಗ್ರಂಥವೆಂದು ಪ್ರಸಿದ್ಧವಿರುವ ಕವಿರಾಜ ಮಾರ್ಗವು ಮೇಲುನೋಟಕ್ಕೆ ಭಾಮಹನ ಕಾವ್ಯಾಲಂಕಾರ ಮತ್ತು ದಂಡಿಯ ಕಾವ್ಯ ಲಕ್ಷಣಗಳನ್ನು ಪ್ರತಿಪಾದಿಸುವಂತೆ ಕಂಡರೂ, ನೃಪತುಂಗನ ಕಾವ್ಯ ಲಕ್ಷಣ ನಿರೂಪಣೆಯು ಭಾರತೀಯ ಕಾವ್ಯ ಮೀಮಾಂಸೆಗೆ ಒಂದು ಮಹತ್ವದ ಕೊಡುಗೆ ಎನ್ನಬಹುದು. ಸಂಸ್ಕೃತದಲ್ಲಿ ಕಾವ್ಯ ಲಕ್ಷಣ ಸಮಸ್ಯೆಯು ಎಂದಿನಿಂದಲೂ ಇದೆ. ಭಾವ/ ರಸ, ಶಬ್ದ-ಅರ್ಥ ಅಲಂಕಾರಾದಿಗಳು ಕಾವ್ಯಕ್ಕೆ ಅಗತ್ಯ. ಆದರೆ ಇವೆಲ್ಲ ಅಂಶಗಳನ್ನು ಅಳವಡಿಸಿ ಒಬ್ಬರಾದರೂ ಕಾವ್ಯ ಲಕ್ಷಣವನ್ನು ನಿರೂಪಿಸಿಲ್ಲ. ನೃಪತುಂಗನು ಸಂಸ್ಕೃತ ಲಾಕ್ಷಣಿಕರ ಕಾವ್ಯ ಲಕ್ಷಣ ನಿರೂಪಣೆಯಲ್ಲಿರುವ ಈ ಕೊರತೆಯನ್ನು ಬಹುಮಟ್ಟಿಗೆ ತುಂಬಿಕೊಂಡಿರುವನು.

ಕವಿಭಾವ ಕೃತಾನೇಕ
ಪ್ರವಿಭಕ್ತ ವಿವಿಕ್ತ ಸೂಕ್ತಮಾರ್ಗಂ
ಕಾವ್ಯಂ ಸವಿಶೇಷ ಶಬ್ದರಚನಂ
ವಿವಿಧಾರ್ಥ ವ್ಯಕ್ತಿವರ್ತಿತಾಲಂಕಾರ
(ಕವಿರಾಜ ಮಾರ್ಗ ೧ -೨೨)

ಭಾವವನ್ನು ಸೇರಿಸಿ ಕಾವ್ಯ ಲಕ್ಷಣವನ್ನು ಹೇಳಿದ್ದು ನೃಪತುಂಗನ ಹೆಚ್ಚುಗಾರಿಕೆ. ನೃಪತುಂಗ ಇಲ್ಲಿ ತನ್ನ

ಗುರು ಜಿನಸೇನನನ್ನು ಅನುಸರಿಸಿದ್ದಾನೆ. ಭಾವವೇ ಕಾವ್ಯದ ಕೇಂದ್ರ ಬಿಂದು. ಕವಿಭಾವದಿಂದ ನಿರ್ಮಿತವಾದ, ಅನೇಕ ಬಗೆಗಳಲ್ಲಿರುವ (ಗದ್ಯ, ಪದ್ಯ ಇತ್ಯಾದಿ) ವೈಶಿಷ್ಟ್ಯಪೂರ್ಣ ಶಬ್ದ ಮತ್ತು ವಿವಿಧಾರ್ಥಗಳನ್ನು ಬಿಂಬಿಸುವ ಅಲಂಕಾರಗಳಿಂದ ಲಕ್ಷಣೋಕ್ತವಿರುವ ಕೃತಿಯೇ ಕಾವ್ಯ ಎಂಬುದನ್ನು ಆತ ಸ್ಪಷ್ಟವಾಗಿ ಹೇಳಿದ್ದಾನೆ. ಶ್ರುತದುಷ್ಟಾದಿ ದೋಷಗಳನ್ನು ಕುರಿತಿರುವ ಭಾಮಹನ ಪದ್ಯದಲ್ಲಿ ನೃಪತುಂಗ ಬದಲಾವಣೆಯನ್ನು ಮಾಡಿ ತನ್ನ ಜಾಣ್ಮೆಯನ್ನು ಮೆರೆದಿರುವುದನ್ನು ಅವರು ಈ ಕೃತಿಯಲ್ಲಿ ತೋರಿಸಿಕೊಟ್ಟಿದ್ದಾರೆ. ಭಾಮಹನ ಕಲ್ಪನಾದುಷ್ಟದೋಷದ ಬದಲು ಕಲ್ಪನೋಕ್ತಿ ಕಷ್ಟ ಎಂಬ ಹೊಸ ದೋಷವನ್ನು ಸೇರಿಸಿ ತನ್ನ ಪ್ರತಿಭೆಯನ್ನು ಮೆರೆದಿದ್ದಾನೆ ಎಂಬುದು ಅವರ ಮತ.

ಕಾವ್ಯಾದರ್ಶ ಗ್ರಂಥಗಳ ಅನುವಾದದಂತೆ ತೋರುತ್ತಿದ್ದರೂ ಅದು ಒಂದು ಸ್ವೋಪಜ್ಞ ಮತ್ತು ಮುಖ್ಯಕೃತಿ; ಕನ್ನಡ ಕಾವ್ಯ ಮೀಮಾಂಸೆಗೆ ಉಪಕಾರಕವಿರುವಂತೆ ಸಂಸ್ಕೃತ ಕಾವ್ಯ ಮೀಮಾಂಸೆಗೂ ಉಪಕಾರಕವಿದೆ. ಆದರೆ ಕವಿರಾಜಮಾರ್ಗವು ಕಾವ್ಯಮೀಮಾಂಸೆಗೆ ಸಂಬಂಧಪಟ್ಟ ಶಾಸ್ತ್ರಗ್ರಂಥ ವೆಂದು ಅದರ ಬೆಲೆ ಕಟ್ಟುವಾಗ ಮಾತು ಕುಂಟುತ್ತದೆ. "Kavirajamarga is not a wonderful masterpiece in either matter or style" (ವಿಷಯದಲ್ಲಾಗಲಿ ಶೈಲಿಯಲ್ಲಾಗಲಿ ಕವಿರಾಜ ಮಾರ್ಗವು ಅಂಥ ಮಹಾಗ್ರಂಥವಲ್ಲ) ಎಂಬೆಲ್ಲ ಹೇಳಿಕೆಗಳನ್ನು ಆಧಾರ ಸಹಿತವಾಗಿ ಅವರು ನಿರಾಕರಿಸಿದ್ದಾರೆ. ಕವಿರಾಜ ಮಾರ್ಗದಲ್ಲಿ ಹೆಚ್ಚಾಗಿ ಭಾಮಹ ದಂಡಿಯರ ಲಕ್ಷಣ-ಲಕ್ಷ್ಯಗಳ ಅನುವಾದವಿದ್ದರೂ ಕಾವ್ಯಶಾಸ್ತ್ರದ ದೃಷ್ಟಿಯಿಂದ ಅದು ಇಷ್ಟು ಮಾತ್ರಕ್ಕೆ ಅನುವಾದ ಗ್ರಂಥವಾಗದು. ಸಾಮಾನ್ಯವಾಗಿ ಯಾವುದೊಂದು ಮೂಲಗ್ರಂಥವನ್ನು ಇನ್ನೊಂದು ಬಗೆಯಲ್ಲಿ ಅದೇ ಭಾಷೆಯಲ್ಲಿ ಅಥವಾ ಅನ್ಯಭಾಷೆಯಲ್ಲಿ ನಿರೂಪಿಸುವುದಕ್ಕೆ ಅನುವಾದ ಎನ್ನುವರು. ಅನುವಾದಕನ ಸ್ವಂತದ ಅಭಿಪ್ರಾಯಗಳಿಗೆ ಅಲ್ಲಿ ಎಡೆಯಿಲ್ಲ. ಕವಿರಾಜಮಾರ್ಗದ ವಿಷಯ ಹೀಗಿಲ್ಲ. ಅದರಲ್ಲಿ ನೃಪತುಂಗ ವಿಚಾರಕ್ರಮದೊಳ್, ಮಾರ್ಗಂ ನಿತ್ಯವಲ್ಲಭ ಮತದಿಂ, ಭಾಸುರ ನೃಪತುಂಗದೇವ ವಿದಿತಕ್ರಮದಿಂ ಮೊದಲಾದ ಸ್ವಾಭಿಪ್ರಾಯ ಸೂಚಕ ಮಾತುಗಳು ಅಡಿಗಡಿಗೆ ಬರುತ್ತವೆ. ಶಾಸ್ತ್ರಗ್ರಂಥಗಳಲ್ಲಿ ಈ ಬಗೆ ಕೊಳುಕೊಡೆ ಸರ್ವೇ ಸಾಮಾನ್ಯ. ಭಾಮಹ, ದಂಡಿ, ಉದ್ಭಟ ಕೃತಿಗಳಲ್ಲಿಯೂ ಈ ರೀತಿಯ ಕೊಳುಕೊಡೆಯಿದೆ. ಹೀಗಿರುವಾಗ ಕವಿರಾಜಮಾರ್ಗ ಕಾರನತ್ತ ಬೆರಳು ನೀಡಿ ಈತ ಅನುವಾದಕ ಎನ್ನುವುದು ಅದಾವ ನ್ಯಾಯ? ಹಾಗೆ ನೋಡಿದರೆ ಕವಿರಾಜಮಾರ್ಗಕಾರ ಪ್ರತಿ ಪರಿಚ್ಛೇದದಲ್ಲಿ ಸ್ವಂತಿಕೆಯನ್ನು ಮೆರೆದಿರುವ ಬಗೆಯನ್ನು ಎತ್ತಿತೋರಿಸಿದ್ದಾರೆ. ಕವಿರಾಜಮಾರ್ಗ ಒಂದು ಸಾಮಾನ್ಯ ಕೃತಿಯಲ್ಲ ಎಂಬುದನ್ನು ನಾಡಿನ ಜನತೆಗೆ ತೋರಿಸಿಕೊಟ್ಟ ಹೆಗ್ಗಳಿಕೆಗೆ ಡಾ. ಚಿಟಗುಪ್ಪಿ ಅವರು ಭಾಜನರಾಗಿದ್ದಾರೆ.

**ಸಂಶೋಧನ ಪಂಚದಶಿ (1974):** ಪ್ರಸ್ತುತ ಕೃತಿಯಲ್ಲಿ ಹದಿನೈದು ಸಂಶೋಧನಾ ಲೇಖನಗಳಿವೆ. ಇಲ್ಲಿನ ಬಹುತೇಕ ಸಂಶೋಧನಾ ಬರಹಗಳು ಕನ್ನಡ ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದವು. ಕನ್ನಡದ ಪ್ರಾಚೀನ ಕವಿಗಳ ಕಾಲ, ಅವರ ಬರವಣಿಗೆಯ ವೈಶಿಷ್ಟ್ಯಗಳನ್ನು ವಿಭಿನ್ನ ನೆಲೆಗಳಲ್ಲಿ ಅರ್ಥೈಸಿದ್ದಾರೆ. ಕವಿ ಪರಮೇಷ್ಠಿ ಕನ್ನಡದಲ್ಲಿ ಬರೆದಿದ್ದಾನೇ ಎಂಬುದು ಈ ಕೃತಿಯ ಮೊದಲ ಲೇಖನ. ಕವಿ ಪರಮೇಷ್ಠಿಯನ್ನು ಅನೇಕ ಜೈನ ಕವಿಗಳು ಸ್ಮರಿಸಿಕೊಂಡಿದ್ದಾರೆ. ಕವಿ ಚರಿತ್ರೆಕಾರರ ಪ್ರಕಾರ ಈತನ ಕಾಲ ಕ್ರಿ. ೯೯೦. ಆದರೆ ಇವನ ಕೃತಿಗಳು ಲಭ್ಯವಿಲ್ಲ. ಕನ್ನಡದ ಪ್ರಸಿದ್ಧ ಕವಿಗಳಾದ ಚಾವುಂಡರಾಯ, ನೇಮಿಚಂದ್ರ, ಪಾರ್ಶ್ವ ಪಂಡಿತ, ಮಂಗರಸ ಮೊದಲಾದವರು ಕವಿ ಪರಮೇಷ್ಠಿಯನ್ನು ತಮ್ಮ ಕೃತಿಗಳಲ್ಲಿ ಕೊಂಡಾಡಿದ್ದಾರೆ. ಜಿನಸೇನ ಗುಣಭದ್ರರ ಕೃತಿಗಳಲ್ಲಿಯೂ ಕವಿಪರಮೇಷ್ಠಿ, ಶ್ರೇಷ್ಠ ಕವಿ (ಕವೀನಾಂ ಪರಮೇಶ್ವರ) ಛಂದೋಲಂಕಾರ ಕೋವಿದ, ಆತ ೬೩ ಶಲಾಕಾಪುರುಷ ಪುರಾಣವು ಗದ್ಯ ಕಥಾರೂಪದಲ್ಲಿದ್ದು ವಾಗರ್ಥ ಸಂಗ್ರಹ ಎಂಬ ಹೆಸರಿನಿಂದ ಪ್ರಸಿದ್ಧವಿದ್ದಿತು. ಜಿನಸೇನ ಗುಣಭದ್ರರು ಅದನ್ನು ತಮ್ಮ ಕೃತಿಗೆ ಮಾತೃಕೆಯೆಂದು ಬಳಸಿ ಕೊಂಡಿದ್ದರು. ಕವಿಪರಮೇಷ್ಠಿಯ ಕೃತಿ ದೊರೆತಿಲ್ಲವಾದರೂ ಆತನ ಕೆಲವು ಪದ್ಯಗಳು ಚಾವುಂಡರಾಯ ಪುರಾಣದಲ್ಲಿ ಉಕ್ತವಾಗಿವೆ. ಕವಿ ಪರಮೇಷ್ಠಿಯ ವಾಗರ್ಥ ಸಂಗ್ರಹ ಕೃತಿಯ ಸ್ವರೂಪದ ಕುರಿತು ಡಾ. ಚಿಟಗುಪ್ಪಿ ಅವರು ಸಾಕಷ್ಟು ಚರ್ಚಿಸಿದ್ದಾರೆ.

ಕವಿ ಪರಮೇಷ್ಠಿಯನ್ನು ಸ್ತುತಿಸಿದವರಲ್ಲಿ ಜಿನಸೇನ, ಗುಣಭದ್ರ ಇಬ್ಬರನ್ನು ಬಿಟ್ಟು ಮಿಕ್ಕವರೆಲ್ಲ ಕನ್ನ ಕವಿಗಳಾಗಿರುವುದರಿಂದ ಆತನ ಈ ಕೃತಿ ಕನ್ನಡದಲ್ಲಿರಬೇಕೆಂಬ ಊಹೆಗೆ ಅವರು ಬರುತ್ತಾರಲ್ಲದೆ, ಹತ್ತನೆಯ ಶತಮಾನದ ಪಂಪನಿಂದ ತೊಡಗಿ ಹದಿನೇಳನೆಯ ಶತಮಾನದ ಧರಣೀ ಪಂಡಿತನವರೆಗೆ ಆಗಿಹೋದ ಕನ್ನಡ ಕವಿಗಳು ಸಮಂತಭದ್ರ, ಕವಿ ಪರಮೇಷ್ಠಿ, ಜಿನಸೇನ, ಗುಣಭದ್ರರನ್ನು ಸ್ಮರಿಸಿದ್ದಾರೆ. ಕವಿ ಪರಮೇಷ್ಠಿಯ 'ಗದ್ಯಕಥೆ' ಅದೊಂದು ಮಿಶ್ರಕೃತಿ. ನೃಪತುಂಗ ಉಲ್ಲೇಖಿಸಿದ ಕನ್ನಡಗಬ್ಬ ಅಥವಾ ಚಿರಂಪನಾಚಾರ್ಯರು ಪ್ರಗತಿಯಿಂದ ನಿಗದಿಸಿದ ಗದ್ಯಕಥೆ ಎಂಬುದನ್ನು ಸೂಚಿಸುತ್ತದೆ ಎಂಬ ಕಡೆಗೆ ಅವರು ವಿದ್ವಾಂಸರ ಗಮನವನ್ನು ಸೆಳೆದಿದ್ದಾರೆ.

ಕನ್ನಡ ವಡ್ಡಾರಾಧನೆಯ ಕುರಿತು ಚರ್ಚಿಸುತ್ತಾ ಅದು ಭಗವತೀ ಆರಾಧನಾದ ಅನುವಾದವೂ ಅಲ್ಲ, ಸಂಗ್ರಹವೂ ಅಲ್ಲ. ಅದರ 35 ನೆಯ ಕವಚಾಧಿಕಾರದಲ್ಲಿಯ ಕವಚಗಾಥೆಗಳಿಗೆ ಸಂಬಂಧಿಸಿದ 19 ಕತೆಗಳು ಇದರಲ್ಲಿವೆ. ವಡ್ಡಾರಾಧನೆಯ ರಚನಾಸ್ವರೂಪ ಭಿನ್ನವಾದುದಕ್ಕೆ ಕಾರಣ ಸಹಿತ ಡಾ. ಚಿಟಗುಪ್ಪಿ ಅವರು ಇಲ್ಲಿ ವಿಶ್ಲೇಷಿಸಿದ್ದಾರೆ. ವಡ್ಡಾರಾಧನ ಕತೆಗಳ ಕವಚ ವೈದಿಕ ಧರ್ಮಪರ ಕವಚಗಳಿಗಿಂತ ಹೇಗೆ ಭಿನ್ನ ಎಂಬುದನ್ನು ಮೊದಲ ಬಾರಿಗೆ ಅವರು ತೋರಿಸಿಕೊಟ್ಟಿದ್ದಾರೆ. ವಡ್ಡಾರಾಧನೆಗೆ ಹರಿಷೇಣನ ಬೃಹತ್ ಕಥಾಕೋಶ ಆಕರವಿರಬೇಕೆಂಬ ಅಭಿಪ್ರಾಯವಿದೆ. ಇದು ಸರಿಯೆನಿಸದು. ಕಥಾ ಶರೀರ, ಕಥಾ ಪುರುಷರ ಹೆಸರು ಇತ್ಯಾದಿ ಒಂದೇ ಆಗಿದ್ದರೂ ವಡ್ಡಾರಾಧನೆಯ ಕಥೆಗಳು ಹೆಚ್ಚು ವಿಸ್ತಾರವಾಗಿವೆ. ವಡ್ಡಾರಾಧನೆಯ ಕಾಲ 920 ಹರಿಷೇಣನ ಕೃತಿ ಹುಟ್ಟಿದ್ದು 932ರಲ್ಲಿ. ಇವೆರಡಕ್ಕೂ ಬೇರೊಂದು ಭಗವತೀ ಆರಾಧನಾ ಕತೆಗಳನ್ನು ಒಳಗೊಂಡಿರುವ ಗ್ರಂಥ ಆಕರವಿರಬಹುದು ಎಂಬ ಊಹೆಯನ್ನು ತೇಲಿಬಿಟ್ಟು ನಾವು ಆ ಕುರಿತು ಚಿಂತಿಸುವಂತೆ ಮಾಡಿದ್ದಾರೆ.

ಪಂಪ ರನ್ನರ ವಸ್ತು ವಿಸಂಗತಿಗಳು ಈ ಲೇಖನ ವಿಮರ್ಶಾತ್ಮಕವಾಗಿದೆ. ಪಂಪ ರನ್ನರ ಕೃತಿಗಳ ತೌಲನಿಕ ವಿವೇಚನೆಯೂ ಇಲ್ಲಿ ಬಂದಿದೆ. ಅರ್ಜುನ ಅರಿಕೇಸರಿಯಲ್ಲಿ ಅಭೇದ ಕಲ್ಪಿಸಿದ ಪಂಪ ದ್ರೌಪದಿಯನ್ನು ಏಕವಲ್ಲಭೆಯಾಗಿ ಯಾಕೆ ಮಾಡಿಕೊಂಡ? ಅಲ್ಲಿ ಆದ ಇಕ್ಕಟ್ಟು ಬಿಕ್ಕಟ್ಟುಗಳ ವಿಚಾರ ವಿಮರ್ಶೆ ಸ್ವಾರಸ್ಯಪೂರ್ಣವಾಗಿ ಇಲ್ಲಿ ಮೂಡಿ ಬಂದಿದೆ. ಅರ್ಜುನ ಸಾಮಂತ ಚೂಡಾಮಣಿ! ಅರ್ಜುನ ತನ್ನ ಪರಾಕ್ರಮವನ್ನು ಮೆರೆಯುವುದರೊಂದಿಗೆ ತಾನು ನರಸಿಂಗ ಜಾಕವ್ವೆಯರ (ಅರಿಕೇಸರಿಯ ತಂದೆ ತಾಯಿ)ಯರ ಮಗನೆಂದು ಹೇಳಿಕೊಳ್ಳುತ್ತಾನೆ. ಅರಿಕೇಸರಿಯ ವಿಜಯ ಸಾಹಸ ಅರ್ಜುನನ ವಿಜಯ ಸಾಹಸವೇ ಆಗಿದೆ. ಆಶ್ರಯದಾತರನ್ನು ಹೊಗಳುವ ಪರಂಪರೆಗೆ ದೊಡ್ಡ ಇತಿಹಾಸವಿದೆ. ವಿಶಾಖದತ್ತ ಕ್ರಿ.ಶ. 450ರಲ್ಲಿ ತನ್ನ ಮುದ್ರಾರಾಕ್ಷಸದಲ್ಲಿ ಇಮ್ಮಡಿ ಚಂದ್ರಗುಪ್ತನನ್ನು ಕೊಂಡಾಡಿದ್ದಾನೆ. ಮುಂದೆ ಬಂದ ಸಂಸ್ಕೃತ ಕವಿಗಳು ಆ ಕೆಲಸ ಮಾಡಿದ್ದಾರೆ. ಕನ್ನಡ ಕವಿಗಳಿಗೂ ಇದು ಪ್ರೇರಣೆ. ಪಂಪ ರನ್ನರು ಸಂಪ್ರದಾಯನಿಷ್ಠ ಕವಿಗಳು, ಶಾಸ್ತ್ರ ಪರಂಪರೆಗಳ ಕಟ್ಟು ಮೀರದೆ ತಾತ್ಕಾಲೀನ

ಲೋಕಾಭಿರುಚಿ ಮತ್ತು ಕಾವ ಶಾಸ್ತ್ರದ ಮಾನದಂಡಗಳನ್ನು ಅನುಸರಿಸಿ ಕಾವ್ಯ ರಚಿಸಿದರು. ಇಂದು ನಮಗೆ ವಿಸಂಗತವಾದುದು ಅಂದು ಸಂಗತವಾಗಿತ್ತು. ಇಲ್ಲವಾದರೆ ಪಂಪರನ್ನರು ಲೋಕಪೂಜ್ಯ ರಾಗುತ್ತಿದ್ದರೆ? ಎಂಬ ಅವರ ಪ್ರಶ್ನೆ ಚಿಂತನೀಯವಾಗಿದೆ. ರನ್ನನ ಮೂರು ಸಮಸ್ಯಾತ್ಮಕ ಛಂಧೋಬಂಧಗಳು, ಮೂವತ್ತಾರರ ಒಗಟು, ಗದಾಯುದ್ಧದ ರಚನಾಕಾಲ, ಜನ್ನನ ಜನ್ಮದಿನ ಮೊದಲಾದ ಲೇಖನಗಳಲ್ಲಿ ಡಾ. ಚಿಟಗುಪ್ಪಿ ಅವರ ಪ್ರತಿಭೆ, ಪಾಂಡಿತ್ಯ, ವಿಶಾಲವಾದ ಓದಿದ ಹಿನ್ನೆಲೆ, ಬಹುಭಾಷಿಕ ಸಂವೇದನೆ ಎದ್ದು ಕಾಣುತ್ತದೆ.

ಇಮ್ಮಡಿ ನಾಗವರ್ಮನ ಛಂದೋವಿಚಿತಿ ಒಂದು ಅಪೂರ್ವ ಕೃತಿ. ಅದರ ಕುರಿತು ಮೊದಲ ಬಾರಿಗೆ ಬೆಳಕು ಹಾಯಿಸಿದವರು ಡಾ. ಚಿಟಗುಪ್ಪಿ. ''ವೇದಾಭ್ಯಾಸಕ್ಕೆ ವೇದಾಂಗ ಅಥ'ವಾ ಷಡಂಗಗಳೆಂದಿರುವ ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು ಮತ್ತು ಜ್ಯೋತಿಷಗಳ ಜ್ಞಾನವು ಅಗತ್ಯವಿರುವಂತೆ, ಕಾವ್ಯಾಭ್ಯಾಸಕ್ಕೆ ವ್ಯಾಕರಣ, ಛಂದಸ್ಸು, ಅಲಂಕಾರ, ಕೋಶವೆಂಬ ಕಾವ್ಯಾಂಗ ಚತುಷ್ಟಯದ ಜ್ಞಾನವು ಅವಶ್ಯಕವಿದೆ. ಸಂಸ್ಕೃತದಲ್ಲಾಗಲಿ ಪ್ರಾಕೃತಾದಿ ಇತರ ಭಾರತೀಯ ಭಾಷೆಗಳಲ್ಲಾಗಲಿ ಕಾವ್ಯಶಾಸ್ತ್ರದ ನಾಲ್ಕೂ ಅಂಗಗಳನ್ನು ಕುರಿತು ನಿರ್ವಿವಾದವಾಗಿ ಒಂದೊಂದು ಗ್ರಂಥವನ್ನು ರಚಿಸಿದವರು ಇಬ್ಬರೇ ಇಬ್ಬರು. ಒಬ್ಬನು ಕಲಿಕಾಲ ಸರ್ವಜ್ಞನೆಂದು ಕೀರ್ತಿವೆತ್ತ ಗುಜರಾತ್‌ನ ಹೇಮಚಂದ್ರನು, ಇನ್ನೊಬ್ಬನು ಕರ್ನಾಟಕದ ಇಮ್ಮಡಿ ನಾಗವರ್ಮನು, ಇಬ್ಬರೂ ಸಮಕಾಲೀನರು, ಇಬ್ಬರೂ ಜೈನರು (ಪುಟ 114. ಸಂಶೋಧನ ಪಂಚದರ್ಶಿ, 1974) ಛಂದೋವಿಚಿತಿ ಕೃತಿಯನ್ನು ರಚಿಸಿದವನು ಎರಡನೆಯ ನಾಗವರ್ಮ ಎಂಬುದನ್ನು ಕನ್ನಡಿಗರಿಗೆ ಆಧಾರ ಸಹಿತ ತೋರಿಸಿಕೊಟ್ಟ ಶ್ರೇಯಸ್ಸು ಡಾ. ಭೀಮರಾವ್ ಅವರಿಗೆ ಸಲ್ಲುತ್ತದೆ. ಇದೇ ವಿಷಯದಲ್ಲಿ ಅವರು ಬಹುಕಾಲ ಸಂಶೋಧನೆ ನಡೆಸಿ ಇಮ್ಮಡಿ ನಾಗವರ್ಮ ಎಂಬ ಕೃತಿಯನ್ನು ರಚಿಸಿ ವಿದ್ವತ್ ವಲಯದಲ್ಲಿ ಹೆಸರು ಮಾಡಿದ್ದು ಉಲ್ಲೇಖನೀಯ ಸಂಗತಿ.

ಆಂಡಯ್ಯನ ಕಬ್ಬಿಗರ ಕಾವ್ಯಕೃತಿಯ ಕುರಿತು ಮುಳಿಯ ತಿಮ್ಮಪ್ಪಯ್ಯನವರು ಬಿಟ್ಟರೆ ಈ ದಿಸೆಯಲ್ಲಿ ವಿಶೇಷವಾಗಿ ಚಿಂತನಮಂಥನ ನಡೆಸಿದವರು. ಡಾ. ಚಿಟಗುಪ್ಪಿ. ಆಂಡಯ್ಯ ಪದನಿಷ್ಪತ್ತಿ, ಕಬ್ಬಿಗರ ಕಾವ್ಯದ ಶೀರ್ಷಿಕೆಯ ವೈಶಿಷ್ಟ್ಯ, ಅಲ್ಲಿನ ಚಾರಿತ್ರಿಕ ಅಂಶಗಳು, ಅಲ್ಲಿನ ಕಾವ್ಯವಸ್ತುಗಳನ್ನು ಸಂಶೋಧಕನ ದೃಷ್ಟಿಯಲ್ಲಿ ನೋಡಿ ಹೊಸ ಒಳನೋಟಗಳನ್ನು ಅನಾವರಣ ಗೊಳಿಸಿದ್ದಾರೆ. ವಚನ, ಉಗಾಭೋಗ ಸುಳಾದಿ ಲೇಖನವು ತೌಲನಿಕ ಚಿಂತನೆಗೆ ಒಳ್ಳೆಯ ಮಾದರಿಯಾಗಿದೆ. ಯಕ್ಷಗಾನ ಆಟದ ಮೂಲ ಮತ್ತು ಸ್ವರೂಪ ಎಂಬ ಲೇಖನ ಅಂತರ್‌ಶಿಸ್ತೀಯ ನೆಲೆಗಳನ್ನು ಒಳಗೊಂಡಿದೆ. ಯಕ್ಷಗಾನವನ್ನು ಸಂಗೀತ, ಮಾರ್ಗ-ದೇಶಿ, ಜಾನಪದ, ಆರ್ಯ-ದ್ರಾವಿಡ ಸಾಹಿತ್ಯ ಸಂಸ್ಕೃತಿಗಳ ಹಿನ್ನೆಲೆಯಲ್ಲಿ ಗಮನಿಸಿರುವುದು ಉಲ್ಲೇಖನೀಯ ಅಂಶ. ಯಕ್ಷಗಾನ ಆಟವಾದರೂ ಭರತಾದಿ ಲಾಕ್ಷಣಿಕರ ನಿರೂಪಣೆಗನುಸರಿಸಿ ಬೆಳೆದು ಬಂದ ಶಾಸ್ತ್ರೀಯ ಕಲೆ, ಕಾಲ ಪ್ರಭಾವದಿಂದ ಇಂದು ಜಾನಪದವಾಗಿದೆ ಎಂಬ ಮಾತು ಸ್ವೀಕಾರಾರ್ಹವಾಗಿದೆ. ಭಕ್ತಿ ಪಂಥದ ಅಂಗವಾಗಿ ಹುಟ್ಟಿಕೊಂಡ ಭಾಗವತ ಸಂಪ್ರದಾಯವು ಕರ್ನಾಟಕಕ್ಕೆ ಪರಿಮಿತವಿರಲಿಲ್ಲ. ಭಕ್ತಿಮಾರ್ಗದ ಜನ್ಮ ಕರ್ನಾಟಕದಲ್ಲಿ, ಭಾರತೀಯ ಸಂಗೀತದ ಬಹುಭಾಗವು ಕರ್ನಾಟಕದ ಕೊಡುಗೆ ಎಂಬ ಮಾತನ್ನು ನೆನೆದರೆ ಈ ಸಂಪ್ರದಾಯದೊಂದಿಗೆ ಯಕ್ಷಗಾನದ ಕಲೆ ಭಾರತದ ಇತರೆಡೆ ಹಬ್ಬಿರುವ ಸಾಧ್ಯತೆಯನ್ನು ಅವರು ಎತ್ತಿ ತೋರಿದ್ದಾರೆ.

ಇಮ್ಮಡಿ ನಾಗವರ್ಮ (1983): ಇದು ಡಾ. ಭೀಮರಾವ್ ಚಿಟಗುಪ್ಪಿ ಅವರ ಮಹತ್ವದ ಸಂಶೋಧನ ಕೃತಿ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಾಗವರ್ಮ ಹೆಸರಿನ ಅನೇಕರಿದ್ದಾರೆ. **990**ರಲ್ಲಿ ಆಗಿ ಹೋಗಿರಬಹುದಾದ ಛಂದೋಂಬುಧಿಕಾರ ಒಂದನೆಯ ನಾಗವರ್ಮ, 1042ರಲ್ಲಿದ್ದ ವರ್ಧಮಾನ ಪುರಾಣ ಕಾವ್ಯಾವಲೋಕನ ಕರ್ತೃ ಇಮ್ಮಡಿ ನಾಗವರ್ಮ, ಕರ್ನಾಟಕ ಕಾದಂಬರಿಯನ್ನು ರಚಿಸಿದ ನಾಗವರ್ಮ ಹೀಗೆ ವಿದ್ವತ್ ವಲಯದಲ್ಲಿ ಸಾಕಷ್ಟು ಗೊಂದಲಗಳಿದ್ದು ಇದನ್ನು ಪುರಾವೆಗಳ ಮುಖೇನ ತಿಳಿಗೊಳಿಸಿದ ಕೀರ್ತಿ ಡಾ. ಚಿಟಗುಪ್ಪಿ ಅವರದು. ನಾಗವರ್ಮರು ಎಷ್ಟು ಮಂದಿ? ನಾಗವರ್ಮನ ಜೀವನ ಸಾಧನೆ ಸಂಶೋಧಕರಿಗೆ ಕಗ್ಗಂಟಾಗಿತ್ತು. ಈ ಜಿಡುಕಾದ ಸಮಸ್ಯೆಯನ್ನು ಶ್ರಮವಹಿಸಿ ಇಮ್ಮಡಿ ನಾಗವರ್ಮನೇ ಛಂದೋವಿಚಿತಿ, ಕರ್ನಾಟಕ ಭಾಷಾಭೂಷಣ (ಸಂಸ್ಕೃತ) ಕಾವ್ಯಾವಲೋಕನ, ಅಭಿದಾನ ವಸ್ತುಕೋಶ, ವರ್ಧಮಾನ ಪುರಾಣ ಎಂಬ ಕೃತಿಗಳನ್ನು ರಚಿಸಿದವನು. ಆತ ಶಾಸ್ತ್ರ ಮತ್ತು ಕಾವ್ಯದಲ್ಲಿ ಪಳಗಿದ ಉಭಯ ಕವಿ. ಸಂಸ್ಕೃತ ಮತ್ತು ಕನ್ನಡಗಳೆರಡರಲ್ಲೂ ಕೃತಿಗಳನ್ನು ರಚಿಸಿದ್ದಾನೆ. ಕರ್ನಾಟಕ ಕಾದಂಬರಿಯನ್ನು ರಚಿಸಿದವನೂ ಇಮ್ಮಡಿ ನಾಗವರ್ಮನೇ ಎಂಬುದನ್ನು ಪ್ರಸ್ತುತ ಕೃತಿಯಲ್ಲಿ ಲೋಕಮುಖಕ್ಕೆ ತೋರಿಸಿ ಕೊಟ್ಟಿದ್ದಾರೆ.

''ಕನ್ನಡ ಕಾದಂಬರಿಯ ಕರ್ತೃ ಇಮ್ಮಡಿ ನಾಗವರ್ಮ ಅವನೇ ಚಾಲುಕ್ಯ ಅಯ್ಯಣ ಪುತ್ರ ಚಂದ್ರನ ಆಶ್ರಿತ, ಜಯಸಿಂಹ ಜಗದೇಕಮಲ್ಲನ ಕಟಕೋಪಾಧ್ಯಾಯ ಎನ್ನಲು ಅವನ ಕಾಲ ಧಾರಾಪುರ ಪರಮಾರ ಭೋಜ ಮತ್ತು ಜಯಸಿಂಹ ಜಗದೇಕಮಲ್ಲನ ಆಳಿಕೆಯ ಅವಧಿಯಲ್ಲಿ ಬರುವುದು (ಅದೇ ಪುಟ 53) ಕಾವ್ಯಮೀಮಾಂಸೆಯಲ್ಲಿ ರಾಜಶೇಖರನು ಕವಿಗಳಲ್ಲಿ ಶಾಸ್ತ್ರಕವಿ, ಕಾವ್ಯ ಕವಿ, ಉಭಯ ಕವಿ ಎಂಬ ಮೂರು ವರ್ಗಗಳನ್ನು ಪ್ರಸ್ತಾಪಿಸಿ ರಾಜಹಂಸವು ಚಂದ್ರಿಕಾಪಾನವನ್ನು ಅರಿಯದು, ಚಕೋರವು ನೀರಕ್ಷೀರ ವಿವೇಕವನ್ನು ಅರಿಯದು ಎಂಬ ದೃಷ್ಟಾಂತದಿಂದ ಮೊದಲಿನ ಇರ್ವರು ತಮ್ಮ ತಮ್ಮ ಕ್ಷೇತ್ರದಲ್ಲಿ ಮಾತ್ರ ಶ್ರೇಷ್ಠರು. ಶಾಸ್ತ್ರಕಾವ್ಯ ಎರಡರಲ್ಲೂ ಸಿದ್ಧಹಸ್ತವಿದ್ದ ಉಭಯಕವಿ ಅವರೀರ್ವರಿಗಿಂತ ಮೇಲು ಎಂದಿರುವನು. ಕನ್ನಡ ಮತ್ತು ಸಂಸ್ಕೃತದಲ್ಲಿ ಎರಡೂ ಬಗೆಯ ಶಾಸ್ತ್ರ ಕಾವ್ಯ ಕೃತಿಗಳನ್ನು ರಚಿಸಿದ ನಾಗವರ್ಮನು ಉಭಯ ಕವಿಯಷ್ಟೇ ಅಲ್ಲ. ಉಭಯ ಭಾಷಾ ಕವಿಯೂ ಆಗಿರುವನು ಎಂಬುದನ್ನು ಸಾಧಾರವಾಗಿ ವಿವರಿಸಿದ್ದಾರೆ. ಕಾವ್ಯ ಶಾಸ್ತ್ರದ ನಾಲ್ಕೂ ಅಂಗಗಳಲ್ಲಿ ಕೃತಿ ರಚಿಸಿದವರಲ್ಲಿ ನಾಗವರ್ಮ ಬಹಳ ಹಳಬ ಎನ್ನುತ್ತಾ ನಾಗವರ್ಮನ ಕೃತಿಗಳನ್ನು ಅಳವಡಿಸಿರುವುದು ಈ ಕೃತಿಯ ಧನಾತ್ಮಕ ಅಂಶ. ಡಾ. ಚಿಟಗುಪ್ಪಿ ಅವರಲ್ಲಿ ಸಂಶೋಧಕನ ಮನಸ್ಸು ಹಾಗೂ ವಿಮರ್ಶಕನ ಸೂಕ್ಷ್ಮಮತಿಗಳೆರಡೂ ಚೆನ್ನಾಗಿ ಮೇಳೈಸಿದ್ದವು ಎಂಬುದಕ್ಕೆ ಈ ಕೃತಿಯೇ ಸಾಕ್ಷಿ.

ಡಾ. ಭೀಮರಾವ ಚಿಟಗುಪ್ಪಿ ಅವರ ಕರ್ಮಭೂಮಿ ಮುಂಬಯಿ. ಮುಂಬಯಿ ಮಹಾನಗರದಲ್ಲಿದ್ದುಕೊಂಡು ಕನ್ನಡ ನಾಡು ನುಡಿಗೆ ಸಂಬಂಧಿಸಿದ ಸಂಶೋಧನೆಯನ್ನು ನಡೆಸುವುದು ಸುಲಭದ ಮಾತಲ್ಲ. ಹೊರನಾಡಿನಲ್ಲಿದ್ದೂ ಡಾ. ಚಿಟಗುಪ್ಪಿ ಅವರು ಕನ್ನಡ ಸಂಶೋಧನ ಲೋಕದ ಎಲ್ಲ ಆಗುಹೋಗುಗಳನ್ನು ಗಮನಿಸುತ್ತಿದ್ದರೆಂಬುದಕ್ಕೆ ಅವರು ತಮ್ಮ ಲೇಖನಗಳಲ್ಲಿ ಕೊಡುತ್ತಿದ್ದ ವಿಶೇಷ ಅಡಿಟಿಪ್ಪಣಿ ಹಾಗೂ ಆಕರ ಸಾಮಗ್ರಿಗಳೇ ಉತ್ತಮ ನಿದರ್ಶನ. ಸಂಗೀತದಲ್ಲಿಯೂ ಅವರಿಗೆ ಒಳ್ಳೆಯ ಹಿಡಿತವಿದ್ದಿತ್ತು. ಸಂಶೋಧಕನೊಬ್ಬ ಮೈಗೂಡಿಸಿ ಕೊಳ್ಳಬೇಕಾದ ಸಮಗ್ರದೃಷ್ಟಿಕೋನವನ್ನು ನಾವು ಅವರಲ್ಲಿ ಕಾಣಬಹುದಾಗಿತ್ತು. ತಮ್ಮ ಬರಲಣಿಗೆಯ ಕೃತಿಗಳ ಮೂಲಕ ಕನ್ನಡ ಸಂಶೋಧನ ಕ್ಷೇತ್ರದಲ್ಲಿ ಮಿಂಚಿದ ಡಾ. ಭೀಮರಾವ ಚಿಟಗುಪ್ಪಿ ಬಹುಕಾಲ ನಮ್ಮ ನೆನಪಿನಲ್ಲಿ ಉಳಿಯಬಲ್ಲರು.

## ಡಿ.ವಿ.ಜಿ. ಮತ್ತು ಸಾರ್ವಜನಿಕ ಜೀವನ

(ಪುಟ 7ರಿಂದ)

ಪೂರ್ವಾಪರಗಳನ್ನು ಯೋಚಿಸಿ ಹೇಳುತ್ತಿದ್ದೇನೆ. ನಾವು ಆ ಆದರ್ಶ ಸಾಧನೆಗಾಗಿ ಪ್ರಯತ್ನ ಪಡಬೇಕು, ಅದರ ಪಾಲನೆಗಾಗಿ ಬೇಕಾದ ವಿವೇಕವನ್ನು ಮೊದಲು ಸಂಪಾದಿಸಿ ಕೊಳ್ಳಬೇಕು''

ಕೆಲವು ಮಂದಿ ಸದಸ್ಯರು ಜವಾಬ್ದಾರಿ ಸರಕಾರವೆಂಬುದಾಗಿ ಸ್ಪಷ್ಟವಾಗಿ ಘೋಷಣೆ ಮಾಡುವುದರಿಂದ ರಾಜಕೀಯ ಸಂಬಂಧವಾದ ಪ್ರಯೋಜನವಿದೆಯೆಂಬುದು ಸಂದೇಹಾಸ್ಪದವಾದ ವಿಚಾರವೆಂದು ವಾದಿಸಿದರು.

ಇದನ್ನು ಗಮನಿಸಿ, ಇನ್ನು ಸಮಿತಿಯ ಸದಸ್ಯರಾಗಿ ಮುಂದುವರಿಯುವುದರಲ್ಲಿ ಹೆಚ್ಚಿನ ಉಪಯೋಗವೇನೂ ಇಲ್ಲವೆಂದು ತಿಳಿದ ಡಿ.ವಿ.ಜಿ., ಮಿರ್ಜಾ ಸಾಹೇಬರಿಗೆ, ತಾವು ಸಮಿತಿಯಿಂದ ಹೊರಬರುವುದಾಗಿ ಪತ್ರ ಬರೆದರು. ಡಿ.ವಿ.ಜಿ. ಒಂದು 'ಭಿನ್ನಾಭಿಪ್ರಾಯ ಟಿಪ್ಪಣಿ'ಯನ್ನು ಕೊಟ್ಟು, ಅದರಲ್ಲಿ ಶಾಸನ ಸಂಸ್ಥೆಗೆ ಜವಾಬ್ದಾರರಾಗಿರುವ ಮಂತ್ರಿಮಂಡಲ ಸರಕಾರ ನಡೆಯಬೇಕು'' ಎಂಬ ಧ್ಯೇಯವನ್ನು ಪ್ರಖರವಾಗಿ ಪ್ರತಿಪಾದಿಸಿದರು. ಆ ಧ್ಯೇಯ ಸಾಧನೆ ಕ್ರಮವಾಗಿ ಆಗಬೇಕಾದದ್ದು ಮತ್ತು ಅದರ ಮುಂದಿನ ಹೆಜ್ಜೆಯನ್ನು ನಿರ್ಧರಿಸುವವರು ಸರಕಾರದವರಲ್ಲ, ಶಾಸನ ಸಭೆಯೇ ಎಂದು ಒತ್ತಿ ಹೇಳಿದರು.

ಆದರೆ ಮಿರ್ಜಾ ಸರ್ಕಾರ ಈ ಸಮಿತಿಯ ಪ್ರಮುಖ ಶಿಫಾರಸುಗಳನ್ನು ಅಲಕ್ಷಿಸಿ ಹೆಚ್ಚು ಮಂದಿ ಜನಪ್ರತಿನಿಧಿಗಳಿಗೆ ಸ್ಥಾನ ನೀಡುವುದು ಇಂಥ ಸಣ್ಣಪುಟ್ಟ ಸುಧಾರಣೆಗಳಿಗಷ್ಟೆ ಚಾಲನೆ ಕೊಟ್ಟಿತು. ಡಿ.ವಿ.ಜಿ. ನಿರಾಶರಾದರು. 1947ರ ಆಗಸ್ಟ್ 15ಕ್ಕೆ ಬಂದ ಸ್ವಾತಂತ್ರ್ಯದ ಹಿಂದೆ ಡಿ.ವಿ.ಜಿ.ಯಂಥ ಎಷ್ಟು ಮಂದಿಯ ಎಷ್ಟು ರೀತಿಯ ತಪಸ್ಸು ಇತ್ತು ಎಂಬುದನ್ನು ನಾವು ಮರೆಯದೆ ಸ್ಮರಿಸಬೇಕು.

### ಸಮಾಜ ಸಂಘಟಕರಾಗಿ ಡಿವಿಜಿ.

ಸಂಸ್ಥೆ ಸಂಘಟನೆಗಳ ಪ್ರವರ್ತಕರಾಗಿ ಡಿ.ವಿ.ಜಿ.ಯವರ ಕಾರ್ಯವನ್ನು ಈಗ ಅವಲೋಕನ ಮಾಡೋಣ.

ಸಮಾಜವನ್ನು ಸಕ್ರಿಯಗೊಳಿಸಬೇಕೆನ್ನುವುದು ಡಿ.ವಿ.ಜಿ.ಯವರ ಒಂದು ಜೀವನ ವ್ರತವಾಗಿತ್ತು. ಐವತ್ತರವತ್ತು ವರ್ಷಕಾಲ ಅವರು ಇಂತ ಒಂದಲ್ಲ ಒಂದು ಪ್ರಯತ್ನ ನಡೆಸುತ್ತಲೇ ಇದ್ದರು.

1910ರ ಸುಮಾರಿನ ವರ್ಷಗಳಲ್ಲಿ ವಿಧವಾ ವಿವಾಹಕ್ಕೆ ಪೋಷಕವಾಗಿದ್ದ ಹಲವಾರು ಪ್ರಯತ್ನಗಳನ್ನು ಡಿ.ವಿ.ಜಿ. ಹಾರ್ದಿಕವಾಗಿ ಬೆಂಬಲಿಸಿದರು. ಚಕ್ರವರ್ತಿ ವೆಂಕಟವರದಯ್ಯಂಗಾರ್ಯರು ಬೆಂಗಳೂರಿನಲ್ಲಿ ಸ್ಥಾಪಿಸಿದ ಅಬಲಾಶ್ರಮದ ಬೆಳವಣಿಗೆಯಲ್ಲಿ ಡಿ.ವಿ.ಜಿ.ಯವರ ಸಕ್ರಿಯ ಪಾತ್ರವಿತ್ತು. ಹಲವಾರು ವಿಧವಾ ವಿವಾಹಗಳಲ್ಲಿ ಡಿ.ವಿ.ಜಿ. ತಾವೆ ಮಗುಟ ಉಟ್ಟು ತಮಗೆ ಬಂದ ಮಂತ್ರಗಳನ್ನು ಬಳಸಿ ಪೌರೋಹಿತ್ಯವನ್ನು ನಡೆಸಿದ್ದುಂಟು. ಸಾಂಪ್ರದಾಯಿಕ ಪುರೋಹಿತರುಗಳಿಂದ ಈ ಕೆಲಸಕ್ಕೆ ಸಹಕಾರ ನಿರೀಕ್ಷಿಸುವ ವಾತಾವರಣ ಆ ದಿನಗಳಲ್ಲಿ ಇರಲಿಲ್ಲ.

ವೈದ್ಯರಾಗಲಿರುವವರಿಗೆ ಒಂದಷ್ಟು ಸಾಹಿತ್ಯ ಪರಿಚಯವೂ ಬೇಕು; ಸಾಹಿತ್ಯಜ್ಞಾನವಿಲ್ಲದವರಿಗೆ ಮನುಷ್ಯಸ್ವಭಾವ ಗೊತ್ತಾಗುವುದು ಕಷ್ಟ - ಈ ದೃಷ್ಟಿಯನ್ನು ಪ್ರಚಾರಮಾಡಬೇಕೆಂದು ಡಿ.ವಿ.ಜಿ. ಯವರಿಗೆ ಅನಿಸಿತು. ಅವಕಾಶ ಸಿಕ್ಕಾಗೆಲ್ಲಾ ಅದನ್ನು ಪ್ರತಿಪಾದನೆ ಮಾಡಿದರು.

ಇಂಥ ಇತರ ಪ್ರಯತ್ನಗಳನ್ನೂ ಡಿ.ವಿ.ಜಿ. ಆಗಿಂದಾಗ ಮಾಡುತ್ತಲೇ ಇದ್ದರು. ಗಾಂಧಿಯವರ ದಕ್ಷಿಣ ಆಫ್ರಿಕ ನಿಧಿಗೆ ಡಿ.ವಿ.ಜಿ. ಹಣ ಸಂಗ್ರಹ ಮಾಡಿ ಕಳಿಸಿದ್ದರು.

ಬೆಂಗಳೂರಿನಲ್ಲಿ ಸಮಾಜ ಸಂಸ್ಕೃತಿಗಳ ಅಭಿವೃದ್ಧಿಗಾಗಿ ಹುಟ್ಟಿದ ಒಂದು ಸಂಸ್ಥೆ ರಾನಡೆ ಸೊಸೈಟಿ. ಐದಾರು ವರ್ಷಗಳು ಕೆಲಸ ಮಾಡಿ ಅದು 1907ರ ಹೊತ್ತಿಗೆ ಅಸ್ತವಾಯಿತು. ಅದರ ಸ್ಥಾನಕ್ಕೆ ಬಂದದ್ದು ಫ್ರೆಂಡ್ಸ್ ಯೂನಿಯನ್ ಎಂಬ ಸಂಸ್ಥೆ. ಶನಿವಾರ ಭಾನುವಾರಗಳು ಅದರ ಆಶ್ರಯದಲ್ಲಿ ಷೇಕ್ಸ್‌ಪಿಯರ್ ಡೇ, ಕಾಳಿದಾಸ ಡೇ ಎಂಬ ಹೆಸರಿನಲ್ಲಿ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದು. ಶೆಲ್ಲಿ ಡೇ ಎಂಬುದನ್ನು 10.8.1916ರಂದು ಆಚರಿಸಿದ ದಿನ ಸೆಂಟ್ರಲ್ ಕಾಲೇಜಿನ ಪ್ರೊ. ಫ್ರಾಂಕ್ ಆರ್. ಸೆಲ್ ಅಧ್ಯಕ್ಷರು. ಎಂ. ಜಿ. ವರದಾಚಾರ್ಯರು ಪ್ರೊ. ಮೆಕಾಲ್ಪೈನ್ ಅವರೂ ಡಿ.ವಿ.ಜಿ.ಯವರೂ ಉಪನ್ಯಾಸಕರು. ಡಿ.ವಿ.ಜಿ.ಯವರು ಶೆಲ್ಲಿ ಕವಿಯ 'ಅಡೋನೇಯ್' ಕಾವ್ಯವನ್ನು ಕುರಿತು ಮಾತನಾಡುತ್ತ ಅದರಲ್ಲಿರುವ ಪದ್ಯಗಳಿಗೂ ವೇದಾಂತ ಮತದ ತತ್ತ್ವಗಳಿಗೂ ಇರುವ ಸಾಮ್ಯವನ್ನು ಬಹುಸೊಗಸಾಗಿ ವರ್ಣಿಸಿದರು. ಪ್ರೊ. ಮೆಕಾಲ್ಪೈನ್ ಭಾರತಕ್ಕೆ ಬಂದಿದ್ದರ ಹೊಸತು. ಆತನಿಗೆ ವರದಾಚಾರ್ಯರ ಮತ್ತು ಡಿ.ವಿ.ಜಿ. ಯವರ ಮಾತನ್ನು ಕೇಳಿ ಆಶ್ಚರ್ಯ ವಾಯಿತಂತೆ - ಈ ದೇಶದ ಜನ ಇಷ್ಟು ಚೆನ್ನಾಗಿ ಇಂಗ್ಲಿಷ್ ಮಾತನಾಡುತ್ತಾರೆಯೆ ಎಂದು.

1916-17ರ ಹೊತ್ತಿನಲ್ಲಿ ಪ್ರಾರಂಭವಾದ 'ನಾನ್ - ಎಂಟಿಟೀಸ್' ಅನಾಮಧೇಯರು ಎಂಬ ಸಂಸ್ಥೆಯಲ್ಲಿ ಡಿ.ವಿ.ಜಿ.ಯವರು ಪಾಲುಗೊಂಡಿದ್ದರು. ಈ ಸಂಸ್ಥೆಯ ಉದ್ದೇಶ ಸ್ವಲ್ಪ ಹಣವನ್ನು ಶೇಖರಿಸಿ, ವಿದೇಶಕ್ಕೆ ಹೋಗಬೇಕೆಂದಿರುವ ಆದರೆ ಉಪಪತ್ತಿಯಿಲ್ಲದಿರುವ ಪ್ರತಿಭಾವಂತರಿಗೆ ಸಹಾಯ ಮಾಡುವುದು, ಇತರ ದೇಶ ಹಣ ಸಂಗ್ರಹ ಉದ್ದೇಶಗಳಿಗೂ ಸಹಾಯ ಮಾಡುವುದು.

ಆನಿಬೆಸೆಂಟ್ ನಿಧಿಗೆ, ಸ್ವಾಮಿ ಶ್ರದ್ಧಾನಂದರು ಪ್ರಾರಂಭಿಸಿದ್ದ ಪಂಜಾಬ್ ರಿಲೀಫ್ ಫಂಡ್‌ಗೆ, ಡಿ.ವಿ.ಜಿ. 'ಕರ್ನಾಟಕ' ಪತ್ರಿಕೆಯ ಮೂಲಕ ದ್ರವ್ಯ ಸಂಗ್ರಹ ಮಾಡಿ ಕಳುಹಿಸಿದರು. ಹಾಗೆಯೇ ಕುಷ್ಠರೋಗಿಗಳಿಗಾಗಿ ಹಣ ಸಂಗ್ರಹ ಮಾಡಿಕೊಡುತ್ತಿದ್ದರು.

ಬೆಂಗಳೂರು ಸಿದ್ದಿಕಟ್ಟೆಯಲ್ಲಿದ್ದ ಕೆ. ಎಸ್. ಕೃಷ್ಣಯ್ಯರ್ ಅವರ ಐರಿಷ್ ಪ್ರೆಸ್ ಮುದ್ರಣಾಲಯಕ್ಕೆ ಸೇರಿದಂತೆ ಒಂದು ಖಾಲಿ ಕೊಠಡಿಯಿತ್ತು. ಅಲ್ಲಿ ಡಿ.ವಿ.ಜಿ., ಎಂ.ಜಿ. ವರದಾಚಾರ್ಯರು ಮುಂತಾದವರ ಉಮೇದಿನಿಂದ ಆರಂಭವಾದದ್ದು, 'ಪಾಪ್ಯುಲರ್ ಎಜುಕೇಶನ್ ಲೀಗ್' ವಾಚನಾಲಯ, ಪ್ರತಿವಾರಗನ್ಯರೊಬ್ಬರಿಂದ ಉಪನ್ಯಾಸ, ಆಗಾಗ ಕಾವ್ಯವಾಚನ, ದೀಪಾವಳಿಯ ಸಂದರ್ಭದಲ್ಲಿ ಮಾಗಡಿ ರಸ್ತೆಯ ಕುಷ್ಠರೋಗಿಗಳ ಹಾಗೂ ಊರಿನ ಒಂದೆರಡು ಆಸ್ಪತ್ರೆಗಳಲ್ಲಿ ಅಸಹಾಯ ರೋಗಿಗಳಿಗೆ ಸಿಹಿತಿಂಡಿಗಳನ್ನೂ ಬಟ್ಟೆ ಬರೆಗಳನ್ನೂ ಹಂಚುವುದು - ಇವು ಪಾಪ್ಯುಲರ್ ಎಜುಕೇಶನ್ ಲೀಗ್ ಸಂಸ್ಥೆಯ ಸಾಧನೆಗಳಲ್ಲಿ ಕೆಲವು. ನಾಲ್ಕೈದು ವರ್ಷ ಈ ಸಂಸ್ಥೆ ಪ್ರಶಂಸಾರ್ಹ ರೀತಿಯಲ್ಲಿ ಕೆಲಸ ಮಾಡಿತು.

ಕೆಮ್ಮಣ್ಣುಗುಂಡಿ ರಸ್ತೆಯಲ್ಲಿ (ಗುಡ್ಸ್ ಶೆಡ್ ರೋಡ್) ಮಿಲ್ ಕಾರ್ಮಿಕರ ಉಪಯೋಗಕ್ಕಾಗಿ ರಾತ್ರಿ ಶಾಲೆಯೊಂದನ್ನು ಆರಂಭಿಸಲಾಯಿತು. ಗೋಖಲೆಯವರ ಹೆಸರಿನಲ್ಲಿ, ಎರಡು ಮೂರು ವರ್ಷ ನಡೆಸಿದ ಮೇಲೆ ಶಾಲೆಯ ಯಜಮಾನ್ಯವನ್ನು ಸರ್ಕಾರಕ್ಕೆ ವಹಿಸಿಕೊಡಲಾಯಿತು.

ಕೃಷ್ಣಯ್ಯರ್ ಅವರ ಐರಿಷ್ ಪ್ರೆಸ್ಸಿನಲ್ಲಿಯೇ ಆರಂಭವಾದ ಇನ್ನೊಂದು ಸಂಸ್ಥೆ 'ಬೆಂಗಳೂರು ಸ್ಟಡಿ ಕ್ಲಬ್'. ಈ ಪ್ರಯತ್ನದಲ್ಲಿಯೂ ಉತ್ಸಾಹದಿಂದ ಸಹಕರಿಸಿದವರು ಡಿ.ವಿ.ಜಿ. ತಿಂಗಳಿಗೊಮ್ಮೆ ಗೋಷ್ಠಿಯ ಮಿತ್ರರೆಲ್ಲ ಸೇರಿ ಭೋಜನ, ಉಪನ್ಯಾಸ, ಚರ್ಚೆ ನಡೆಸುವುದೆಂದು ಏರ್ಪಾಟು. ಉಪನ್ಯಾಸ ಚರ್ಚೆಗಳಿಗಿಂತ ಭೋಜನದ್ದೇ ಮೇಲುಗೈಯಾಗಿ ಈ ಪ್ರಯತ್ನಕ್ಕೆ ಮಂಗಳ ಹಾಡಬೇಕಾಯಿತಂತೆ.

1917-18ರಲ್ಲಿ ನಡೆದ ಇಂಥ ಒಂದು ಉಪಕ್ರಮ - 'ಮೈಸೂರು ಮಹಾಜನ ಸಭೆ' ಜಾತೀಯ ಪ್ರಸಕ್ತಿಯಿಲ್ಲದೆ, ಮುಖ್ಯ ಸಾರ್ವಜನಿಕ ಸಮಸ್ಯೆಗಳನ್ನು ವ್ಯಾಸಂಗ ಮಾಡಿ ಮನವಿ ಬರೆದು ಸರ್ಕಾರಕ್ಕೆ ಕಳಿಸುವುದು ಆ ಸಂಸ್ಥೆಯ ಉದ್ದೇಶ. ಅಂಚೆ ಇಲಾಖೆಯ ಮುಖ್ಯಸ್ಥರಾಗಿ ನಿವೃತ್ತರಾಗಿದ್ದ ರಾವ್‌ಬಹದ್ದೂರ್ ಕೆ. ಶ್ರೀನಿವಾಸರಂಗಾಚಾರ್ಯರು ಸಂಸ್ಥೆಗೆ ಕೆಲಕಾಲ ಅಧ್ಯಕ್ಷರಾಗಿದ್ದರು. ವಕೀಲರಾಗಿದ್ದ ಎ. ಆರ್. ನಾಗೇಶ್ವರ ಅಯ್ಯರ್, ಸಿ. ಕೃಷ್ಣಮೂರ್ತಿ, ಸಾಹಿತಿ ಎಂ. ಎಸ್. ಪುಟ್ಟಣ್ಣನವರು ಮುಂತಾದವರು ಸದಸ್ಯರು.

(ಮುಂದಿನ ಸಂಚಿಕೆಗೆ...)

MH/MR/ME/093/06-08
Date of Posting : 10-04-2006

ಸುತ್ತ ಮುತ್ತ

# ಮುಂಬಯಿ ವಿ.ವಿ. ಕನ್ನಡ ವಿಭಾಗದ ಬೆಳ್ಳಿ ಹಬ್ಬದ ಸಂಪನ್ನತೆ

ಜಾಗತೀಕರಣದ ಧನಾತ್ಮಕ ಹಾಗೂ ನೇರ ಪರಿಣಾಮಗಳು ಭಾಷಾ ವಿಭಾಗಗಳ ಮೇಲಾಗುತ್ತಿವೆ. ಆ ಹಿನ್ನೆಲೆಯಲ್ಲಿ, ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಬೆಳ್ಳಿ ಹಬ್ಬದ ಆಚರಣೆಗಳು ವಿಶೇಷವಾದ ಮಹತ್ವವನ್ನು ಪಡೆಯುತ್ತವೆ. ಮಹಾರಾಷ್ಟ್ರ ಹಾಗೂ ಕರ್ನಾಟಕಗಳ ಗಾಢವಾದ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಮೈತ್ರಿಯ ಸಂದರ್ಭಗಳಲ್ಲೂ ಇವಕ್ಕೆ ಅವಧಾರಣೆಯು ಸಿಗುತ್ತದೆ. ಈ ಅಂಶಗಳು ತಮಗೆ ತುಂಬ ಸಂತೃಪ್ತಿಯನ್ನಿತ್ತಿವೆ ಎಂದು ಮುಂಬಯಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ವಿಜಯ ಖೋಲೆ ಅಭಿಪ್ರಾಯ ಪಟ್ಟರು.

"ಆದಿ ಕವಿ ಪಂಪ ಪ್ರತಿಷ್ಠಾನ" ಅಣ್ಣಿಗೇರಿ ಮತ್ತು ಕನ್ನಡ ವಿಭಾಗ ಇವುಗಳ ಸಹಭಾಗಿತ್ವದಲ್ಲಿ ಆಯೋಜಿತವಾಗಿದ್ದ, ವಿಭಾಗದ ಬೆಳ್ಳಿ ಹಬ್ಬದ ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು. ಪಂಪ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಸಿ.ಎಸ್. ಹುಬ್ಬಳ್ಳಿಯವರು ವೇದಿಕೆಯಲ್ಲಿ ಉಪಸ್ಥಿತರಾಗಿದ್ದರು. ಶ್ರೀಮತಿ ವೀಣಾ ಶಾಸ್ತ್ರಿಯವರ ಸರಸ್ವತಿ ವಂದನೆಯೊಂದಿಗೆ ಪ್ರಾರಂಭವಾದ ಈ ಕಾರ್ಯಕ್ರಮದಲ್ಲಿ ಶ್ರೀ ಮೋಹನ ಕುಲಕರ್ಣಿ ಮತ್ತು ಸಂಗಡಿಗರು 'ವಿಶ್ವವಿದ್ಯಾಲಯ ಗೀತೆ' ಮತ್ತು ನಾಡಗೀತೆಗಳ ನ್ನು ಪ್ರಸ್ತುತಿ ಪಡಿಸಿದರು.

ಸ್ವಾಗತ ಹಾಗೂ ಪ್ರಾಸ್ತಾವಿಕ ಮಾತುಗಳನ್ನಾಡಿದ ಡಾ. ತಾಳ್ತಜೆ ವಸಂತ ಕುಮಾರರು ವರ್ಷವಿಡೀ ನಡೆದಿದ್ದ ಬೆಳ್ಳಿ ಹಬ್ಬದ ವಿವಿಧ ಚಟುವಟಿಕೆಗಳ ಯಶಸ್ಸಿಗೆ ಕಾರಣರಾದ ವ್ಯಕ್ತಿ ಹಾಗೂ ಶಕ್ತಿಗಳನ್ನು ಕೃತಜ್ಞತಾಪೂರ್ವಕ ಸ್ಮರಿಸಿಕೊಂಡರು.

ಪ್ರತಿಷ್ಠಾನದ ಕಾರ್ಯದರ್ಶಿಗಳಾದ ಪ್ರೊ. ಎಸ್.ಎಸ್. ಹರ್ಲಾಪೂರ ಅವರು ಅದರ ಧ್ಯೇಯೋದ್ದೇಶ ಗಳನ್ನೂ, ಕಾರ್ಯ ವ್ಯಾಪ್ತಿಗಳನ್ನೂ ನಿರೂಪಿಸಿದರು. ಇದೇ ಸಂದರ್ಭದಲ್ಲಿ ಮುಂಬಯಿ ಲೇಖಕಿಯರ ಬಳಗ ''ಸೃಜನಾ''ದ ಹೊಸ ಪ್ರಕಟಣೆಯಾದ ''ಬೆಳಕಿನೆಡೆಗೆ'' ಲೇಖನಗಳ ಸಂಗ್ರಹವನ್ನು ಡಾ. ಖೋಲೆಯವರು ಬಿಡುಗಡೆ ಗೊಳಿಸಿದರು. ಸಂಚಾಲಕಿಯ ನೆಲೆಯಿಂದ ''ಸೃಜನಾ''ದ ಹಿನ್ನೆಲೆಯನ್ನು ನೀಡಿದ ಡಾ. ಸುನೀತಾ ಶೆಟ್ಟಿಯವರು ''ಬೆಳಕಿನೆಡೆಗೆ'' ಕೃತಿಯ ಸ್ವರೂಪವನ್ನು ಸ್ಪಷ್ಟ ಪಡಿಸಿದರು.

ಅನಂತರ ನಡೆದ ''ಪಂಪ : ಒಂದು ಸ್ಮರಣೆ''ಯ ಅಂಗವಾಗಿ ಕರ್ನಾಟಕ ಸರಕಾರದ ಆರೋಗ್ಯ ಶಿಕ್ಷಣ ಸಚಿವರ ಆಪ್ತ ಸಹಾಯಕ ರಾಗಿರುವ ಡಾ. ಎ.ವಿ. ಪ್ರಸನ್ನ ಅವರು "ಪಂಪನ ವರ್ಣನಾ ವೈಖರಿ''ಯ ಬಗೆಗೆ ವಿದ್ವತ್ಪೂರ್ಣವಾದ ಉಪನ್ಯಾಸವನ್ನಿತ್ತರು. ದೇಸಿಯ ಪ್ರಯೋಗಗಳ ಸಂದರ್ಭಗಳಲ್ಲಿ ಅವನ ಪ್ರತಿಭೆ ಪ್ರದರ್ಶಿತವಾಗುತ್ತಿದ್ದ ರೀತಿಗಳನ್ನು ಸೋದಾಹರಣ ವಾಗಿ ವಿವರಿಸಿದರು.

ಈ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ತಾಳ್ತಜೆಯವರು ವಹಿಸಿದ್ದರು. ಶ್ರೀಮತಿ ರೇಖಾ ಎನ್.ವಿ. ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ಅಪರಾಹ್ನ, ಪಂಪನ ಕಾವ್ಯಗಳ ಆಯ್ದ ಭಾಗಗಳನ್ನು ವಿದುಷಿ ಶ್ರೀಮತಿ ಉಮಾ ನಾಗಭೂಷಣ ಅವರು ಸುಶ್ರಾವ್ಯವಾಗಿ ವಾಚನ ಮಾಡಿದರು. ಶ್ರೀಮತಿ ಸುಮನ್ ಚಿಪ್ಳೂಣ್‌ಕರ್ ಅವರ ನಿರೂಪಣೆಯನ್ನು ನೀಡಿದರು.

ಸಾಯಂಕಾಲ, ಡಾ. ವಾಮನ ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ''ದ.ರಾ.ಬೇಂದ್ರೆ ದತ್ತಿ ಉಪನ್ಯಾಸ''ವು ನಡೆಯಿತು. ''ಬೇಂದ್ರೆ ಮತ್ತು ವಿಜ್ಞಾನ'' ಎಂಬ ವಿಭಿನ್ನ ವಸ್ತುವನ್ನು ತಮ್ಮ ಉಪನ್ಯಾಸಕ್ಕೆ ಹುಬ್ಬಳ್ಳಿಯ ಡಾ. ಕೆ.ಎಸ್. ಶರ್ಮ ಅವರು ಆಯ್ದುಕೊಂಡರು.

ಡಾ. ವಾಮನ ಬೇಂದ್ರೆಯವರು, ಅಂಬಿಕಾತನಯದತ್ತರಲ್ಲಿದ್ದ ಆಳವಾದ ಆಧ್ಯಾತ್ಮಿಕ ಪ್ರಜ್ಞೆಗೆ ಒತ್ತು ಕೊಟ್ಟು ಮಾತನಾಡಿದರು.

ಅನಂತರ ನಡೆದ ಸಮಾರೋಪದಲ್ಲಿ ವಿಭಾಗದ ಶೈಕ್ಷಣಿಕ ಅಭಿವೃದ್ಧಿಗಳಿಗೆ ಕಾರಣರಾಗಿರುವ ಆರು ಮಂದಿ ಪ್ರಾಧ್ಯಾಪಕರನ್ನು ವಿಭಾಗದ ವತಿಯಿಂದ ಸನ್ಮಾನಿಸಲಾಯಿತು. ಡಾ. ಸುನೀತಾ ಶೆಟ್ಟಿ, ಡಾ. ಜಿ.ಡಿ. ಜೋಶಿ, ಡಾ. ಜಿ.ವಿ. ಕುಲಕರ್ಣಿ, ಡಾ. ವಿಶ್ವನಾಥ ಕಾರ್ನಾಡ್, ಡಾ. ಸಂಜೀವ ಶೆಟ್ಟಿ ಹಾಗೂ ಡಾ. ಕೆ. ರಘುನಾಥ್ ಅವರ ಬಗೆಗೆ, ಕ್ರಮವಾಗಿ ಶ್ರೀಮತಿ ಮಮತಾ ರಾವ್, ಶ್ರೀಮತಿ ಮೇಧಾ ಕುಲಕರ್ಣಿ, ಶ್ರೀ ವಿವೇಕ ಶಾನುಭಾಗ, ಡಾ. ಕರುಣಾಕರ ಶೆಟ್ಟಿ, ಶ್ರೀ ಈಶ್ವರ ಅಲೆವೂರು ಮತ್ತು ಶ್ರೀ ಮರಿಯಪ್ಪ ನಾಟೇಕರರು ಅಭಿನಂದನಾ ಭಾಷಣಗಳನ್ನು ಮಾಡಿದರಲ್ಲದೆ, ವಿಭಾಗದ ಮುಖ್ಯಸ್ಥರೊಂದಿಗೆ ತಮ್ಮ ಗುರುಗಳನ್ನು ಸನ್ಮಾನಿಸಿದರು.

ಈ ಸನ್ಮಾನದಲ್ಲಿ ಸ್ಮರಣಿಕೆ, ಶಾಲು, ಫಲ ಪುಷ್ಪ ಪ್ರದಾನಗಳೊಂದಿಗೆ ಸನ್ಮಾನಿತರೆಲ್ಲರ ಸಾಹಿತ್ಯ ಕೃತಿಗಳಿಂದ ಆಯ್ದ ಭಾಗಗಳ ಪ್ರಸ್ತುತಿಗಳೂ ನಡೆದುವು. ಕಾರ್ಯಕ್ರಮವನ್ನು ಡಾ. ವಿ.ಕೆ. ಮಣಿಮಾಲಿನಿ ನಿರೂಪಿಸಿ, ವಂದಿಸಿದರು.

## FORTHCOMING PROGRAMMES

30-04-2006 ಬೆಳಿಗ್ಗೆ 11.30ರಿಂದ ಗಣಪತಿ ಪ್ರತಿಷ್ಠಾಪನಾ ದಿನ ನಿಮಿತ್ತ ವಿಶೇಷ ಪೂಜೆ, ಹೋಮ ಮತ್ತು ಪ್ರಸಾದ ವಿನಿಯೋಗ.

06-05-2006 ಸಂಜೆ 05.00ರಿಂದ ಪಂ. ಪಂಚಾಕ್ಷರಿ ಗವಾಯಿಗಳ ಸಂಸ್ಮರಣೆಯಲ್ಲಿ ಖ್ಯಾತ ಗಾಯಕರಿಂದ ಹಿಂದೂಸ್ತಾನೀ ಗಾಯನ ಕಾರ್ಯಕ್ರಮ.

ವಿವರಣೆಗಾಗಿ ಅಸೋಸಿಯೇಷನ್‌ನಲ್ಲಿ ಸಂಪರ್ಕಿಸಿರಿ.

## ಸಂತವಾಣಿ ಗಾಯನ ಸ್ಪರ್ಧೆ

ಮೈಸೂರು ಸಂಗೀತ ವಿದ್ಯಾಲಯ, ಡೋಂಬಿವಲಿ ಯಲ್ಲಿ ಸಂತವಾಣಿ ಗಾಯನ ಸ್ಪರ್ಧೆಯನ್ನು ಇತ್ತೀಚೆಗೆ ಏರ್ಪಡಿಸಲಾಗಿತ್ತು. ಕುಮಾರಿ ಸೌಮ್ಯ ಶಿವರಾಮ ಕೃಷ್ಣನ್, ಕುಮಾರಿ ವಿ. ಕೃತಿಕಾ ಮತ್ತು ಕುಮಾರಿ ಧನ್ಯ ವಾರಿಯರ್ ಕ್ರಮವಾಗಿ ಮೊದಲನೆಯ ಎರಡನೆಯ ಹಾಗೂ ಮೂರನೆಯ ಬಹುಮಾನಗಳನ್ನು ಪಡೆದರು. ಕುಮಾರಿ ದರ್ಶನಾ ಅಯ್ಯರ್‌ಗೆ ಪ್ರೋತ್ಸಾಹ ಬಹುಮಾನ ವನ್ನು ಕೊಡಲಾಯಿತು. ರಾಷ್ಟ್ರೀಯ ಭಾವೈಕ್ಯತೆಯ ಈ ಸಂತವಾಣಿ ಗಾಯನ ಸ್ಪರ್ಧೆಯಲ್ಲಿ ಶ್ರೀಮತಿ ಅಂಜಲಿ ಜೋಶಿ, ಶ್ರೀಮತಿ ಲಲಿತಾ ಮಣಿ ಮತ್ತು ಶ್ರೀ ಪದ್ಮನಾಭ ಸಸಿಹಿತ್ಲು ತೀರ್ಪುಗಾರರಾಗಿ ಭಾಗವಹಿಸಿದ್ದರು. ಇದೆ ಸಂದರ್ಭದಲ್ಲಿ ಶ್ರೀಮತಿ ಅಂಜಲಿ ಜೋಶಿಯವರು ತಾವೇ ರಚಿಸಿದ ಕೃತಿಗಳನ್ನು ಸುಶ್ರಾವ್ಯವಾಗಿ ಹಾಡಿ ಶ್ರೋತೃಗಳೆಲ್ಲರ ಮೆಚ್ಚುಗೆ ಗಳಿಸಿದರು. ಈ ಕಾರ್ಯಕ್ರಮಕ್ಕೆ ಡೊಂಬಿವಲಿಯ ಪ್ರಸಿದ್ಧ ಮಧುಮೇಹ ರೋಗತಜ್ಞ ಡಾ. ವಿಜಯ ನೆಗಳೂರ್ ಮುಖ್ಯ ಅತಿಥಿಗಳಾಗಿದ್ದರು. ಅವರು ''ಭಾರತೀಯ ಸಂತರು ಭಾರತದ ಆಧ್ಯಾತ್ಮ ಸಂಪತ್ತನ್ನು ಶ್ರೀಮಂತಗೊಳಿಸಿ ವಿಶ್ವಕ್ಕೆ ಕೊಟ್ಟ ಕೊಡುಗೆ ಅಪಾರ. ಇಂತಹ ಪುಣ್ಯ ಪುರುಷರ ಸಂದೇಶಗಳನ್ನು ಮನನ ಮಾಡಿಕೊಳ್ಳುವುದರಿಂದ ಮನಸ್ಸು ಪರಿಶುದ್ಧವಾಗಿ ರಚನಾತ್ಮಕ ಚಟುವಟಿಕೆಗಳ ಕಡೆ ಗಮನ ಹರಿಸುವಂತಾಗುತ್ತದೆ'' ಎಂದು ಹೇಳಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶ್ರೀ ಎಸ್. ಸಿ. ನಾಡಿಗೇರ್ ಹಾಗೂ ಶ್ರೀ ಜಿ. ಎಸ್. ನಾಯಕ್ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣೆ ಮಾಡಿದರು.

Edited, Printed & Published by M.A.N. Prasad, On behalf of the Mysore Association, Mumbai. Tel.: 2402 4647 ● Fax : 2401 0574
Email : karunadu@bom5.vsnl.net.in
Printed at Aarati Art Printers, Fort, Mumbai-400 001. * 2266 3361 / 2266 5938